بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಸಂಚಿಕೆ: 20

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

19 ಮೇ 2022, 19 ಹಿಜ್ರತ್ 1401 ಹಿಜರಿ ಶಮ್‌ಸಿ,
17 ಶವ್ವಾಲ್ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاَنْذِرْ بِهِ الَّذِيْنَ يَخَافُوْنَ اَنْ يُّحْشَرُوْٓا
اِلٰى رَبِّهِمْ لَيْسَ لَهُمْ مِّنْ دُوْنِهٖ وَلِيٌّ
وَّلَا شَفِيْعٌ لَّعَلَّهُمْ يَتَّقُوْنَ

**(ಅಲ್ ಅನ್‌ಆಮ್ : 52)**

ಅಂದರೆ: ತಮ್ಮ ಪ್ರಭುವಿನ ಸನ್ನಿಧಿಯಲ್ಲಿ ಒಂದುಗೂಡಿಸಲ್ಪಡಲಿದ್ದೇವೆಂದೂ ತಮಗೆ ಅವನ ಹೊರತು ರಕ್ಷಕನಾಗಿ ಅಥವಾ ಶಿಫಾರಸು ಸ್ವೀಕರಿಸುವವನಾಗಿ ಯಾರೂ ಇಲ್ಲವೆಂದೂ ಭಯಪಡುವವರಿಗೆ, ಇದರ (ಈ ಖುರ್‌ಆನ್) ಮೂಲಕ ಮುನ್ನೆಚ್ಚರಿಕೆ ನೀಡು- ಅವರು ಭಯಭಕ್ತಿಯುಳ್ಳವರಾಗಲಿಕ್ಕೋಸ್ಕರ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ರಮಝಾನ್‌ನ ಬಿಟ್ಟು ಹೋಗಿರುವ ಉಪವಾಸಗಳು

**(1950)** ಅಬು ಸಲ್ಮ ಅವರಿಂದ ವರದಿಯಾಗಿದೆ: ಅವರು ಹೇಳಿದರು: ಹಝ್‌ರತ್ ಆಯೆಶಾ(ರ) ಹೇಳುವುದನ್ನು ನಾನು ಕೇಳಿದ್ದೇನೆ: ರಮಝಾನ್ ಉಪವಾಸವು ನನ್ನ ಮೇಲೆ ಕಡ್ಡಾಯವಾದಾಗ ನಾನು ಅವುಗಳನ್ನು ಪೂರ್ಣಗೊಳಿಸದಿದ್ದರೆ ನಾನು ಅವುಗಳನ್ನು ಶಾಅ್‌ಬಾನ್ ಮಾಸದಲ್ಲಿ ಪೂರೈಸುತ್ತಿದ್ದೆ. ಯಾಹ್ಯಾ ಹೇಳಿದರು: ಪ್ರವಾದಿ(ಸ) ರವರ ಕಾರ್ಯಮಗ್ನತೆಯಿಂದಾಗಿ ಅಥವಾ ಅವರು ಪ್ರವಾದಿ(ಸ) ಅವರ ಸೇವೆಯಲ್ಲಿ ನಿರತರಾಗಿದ್ದರಿಂದ.

### ಇಫ್ತಾರ್ ಸಮಯ

**(1954)** ಹಝ್‌ರತ್ ಉಮರ್(ರ) ಅವರು ವರದಿ ಮಾಡುತ್ತಾರೆ ಪ್ರವಾದಿ(ಸ) ಹೇಳಿದರು: ರಾತ್ರಿ ಆವರಿಸಿದಾಗ ಮತ್ತು ಹಗಲು ಕಳೆದಾಗ ಮತ್ತು ಸೂರ್ಯ ಮುಳುಗಿದರೆ ಉಪವಾಸಿಗನು ಇಫ್ತಾರ್ ಮಾಡಬೇಕು.

### ಇಫ್ತಾರ್ ಮಾಡುವುದರಲ್ಲಿ ಆತುರಪಡಬೇಕು

(1957) ಹಝ್‌ರತ್ ಸಹಲ್ ಬಿನ್ ಸಅದ್(ರ) ವರದಿ ಮಾಡಿತ್ತಾರೆ ಪ್ರವಾದಿ(ಸ) ಹೇಳಿದರು: ಜನರು ತಮ್ಮ ಉಪವಾಸವನ್ನು ಮುರಿಯಲು ಆತುರಪಡುವವರೆಗೂ ಅವರು ಒಳ್ಳೆಯತನದಲ್ಲಿ ಬದುಕುತ್ತಾರೆ.

**(ಸಹೀಹ್ ಬುಖಾರಿ, ಸಂಪುಟ 3, ಕಿತಾಬುಸ್ಸೌಮ್, 2008 ಖಾದಿಯಾನ್‌ನಲ್ಲಿ ಪ್ರಕಟಿತ)**

### ದಿವ್ಯದೂತರು (ಮಲಾಯಿಕ)

ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫ಼ರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

***(ಫ಼ತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

**ತನ್ನ ಬುದ್ಧಿಶಕ್ತಿ ಅಥವಾ ಸಂಪತ್ತಿನ ಬಗ್ಗೆ ಹೆಮ್ಮೆಪಡುವ ವ್ಯಕ್ತಿ ಮೂರ್ಖನಾಗಿದ್ದಾನೆ ಏಕೆಂದರೆ ಇದೆಲ್ಲವೂ ಸರ್ವಶಕ್ತನಾದ ಅಲ್ಲಾಹನ ಉಡುಗೊರೆಯಾಗಿದೆ, ಅವನು ಅದನ್ನು ಎಲ್ಲಿಂದ ಪಡೆದನು?**
**ದುಆ ಮಾಡುವ ಒಬ್ಬ ವ್ಯಕ್ತಿಯು ತನ್ನ ದೌರ್ಬಲ್ಯಗಳನ್ನು ಸಂಪೂರ್ಣವಾಗಿ ಅರಿತುಕೊಳ್ಳಬೇಕು, ಅವನು ಯಾವಾಗ ತನ್ನ ದೌರ್ಬಲ್ಯಗಳನ್ನು ಅರಿತುಕೊಳ್ಳುತ್ತಾನೊ ಆಗ ಅವನು ಅಲ್ಲಾಹನ ಸಹಾಯದ ಅಗತ್ಯವನ್ನು ಕಂಡುಕೊಳ್ಳುತ್ತಾನೆ. ಹೀಗೆ ಅವನ ಆಂತರಾಳದಲ್ಲಿ ದುಆವಿಗಾಗಿ ಹುಮ್ಮಸ್ಸು ಹುಟ್ಟುತ್ತದೆ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

**ಖುಲಿಖಲ್ ಇನ್ಸಾನು ಝುಯೀಫ** (ಅನ್ನಿಸಾ: 29) ಮನುಷ್ಯ ದುರ್ಬಲ ಜೀವಿ ನಿಜ. ಅವನು ಅಲ್ಲಾಹನ ಅನುಗ್ರಹ ಮತ್ತು ಕರುಣೆಯನ್ನು ಹೊರತುಪಡಿಸಿ ಏನನ್ನೂ ಮಾಡಲಾರನು. ಅವನ ಅಸ್ತಿತ್ವ, ಅವನ ಪಾಲನೆ ಹಾಗೂ ಬದುಕುಳಿಯುವ ವಿಧಾನಗಳು ಸರ್ವಶಕ್ತನಾದ ಅಲ್ಲಾಹನ ಕೃಪೆಯ ಮೇಲೆ ಅವಲಂಬಿತವಾಗಿದೆ. ತನ್ನ ಬುದ್ಧಿಶಕ್ತಿ ಅಥವಾ ಸಂಪತ್ತಿನ ಬಗ್ಗೆ ಹೆಮ್ಮೆಪಡುವ ವ್ಯಕ್ತಿಯು ಮೂರ್ಖನಾಗಿದ್ದಾನೆ, ಏಕೆಂದರೆ ಇದೆಲ್ಲವೂ ಸರ್ವಶಕ್ತನಾದ ಅಲ್ಲಾಹನ ಉಡುಗೊರೆಯಾಗಿದೆ, ಅವನು ಅದನ್ನು ಎಲ್ಲಿಂದ ಪಡೆದನು? ದುಆಗೋಸ್ಕರ ಅಗತ್ಯವಿರುವುದೇನೆಂದರೆ ಒಬ್ಬ ವ್ಯಕ್ತಿಯು ತನ್ನ ದೌರ್ಬಲ್ಯಗಳನ್ನು ಸಂಪೂರ್ಣವಾಗಿ ನೋಡಿಕೊಳ್ಳಬೇಕು, ಅವನು ಯಾವಾಗ ತನ್ನ ದೌರ್ಬಲ್ಯಗಳನ್ನು ಅರಿತುಕೊಳ್ಳುತ್ತಾನೊ ಆಗ ಅವನು ಅಲ್ಲಾಹನ ಸಹಾಯದ ಅಗತ್ಯವನ್ನು ಕಂಡುಕೊಳ್ಳುತ್ತಾನೆ ಹೀಗೆ ಅವನ ಆಂತರಾಳದಲ್ಲಿ ದುಆ ಮಾಡುವ ಹುಮ್ಮಸ್ಸು ಹುಟ್ಟುತ್ತದೆ ಒಬ್ಬ ವ್ಯಕ್ತಿಯು ತೊಂದರೆಯಲ್ಲಿದ್ದಾಗ, ನೋವು ಅಥವಾ ಸಂಕಟವನ್ನು ಅನುಭವಿಸಿದಾಗ, ಅವನು ಅಳುತ್ತಾನೆ ಮತ್ತು ಜೋರಾಗಿ ಕೂಗುತ್ತಾನೆ ಮತ್ತು ಇತರರಿಂದ ಸಹಾಯವನ್ನು ಕೇಳುತ್ತಾನೆ. ಅದೇ ರೀತಿಯಲ್ಲಿ, ಅವನು ತನ್ನ ದೌರ್ಬಲ್ಯಗಳನ್ನು ನೋಡಿದಾಗ ಅವನು ತನ್ನನ್ನು ಸರ್ವಶಕ್ತನಾದ ಅಲ್ಲಾಹನ ಸಹಾಯದ ಅಗತ್ಯವನ್ನು ಕಂಡುಕೊಳ್ಳುತ್ತಾನೆ ಆಗ ಅವನ ಆತ್ಮವು ಸಂಪೂರ್ಣ ದುಃಖದಿಂದ ಚಂಚಲವಾಗಿ ದೈವತ್ವದ ಆಸ್ತಾನ ದಲ್ಲಿ ಬಿದ್ದು **ಯಾರಬ್ ಯಾರಬ್** ಎಂದು ಕೂಗುತ್ತದೆ. ನೀವು ಪವಿತ್ರ ಖುರ್‌ಆನ್ ಅನ್ನು ಗಾಂಭೀರ್ಯದಿಂದ ನೋಡಿದರೆ, ಮೊದಲ ಸೂರಾದಲ್ಲಿ, ಸರ್ವಶಕ್ತನಾದ ಅಲ್ಲಾಹನು ದುಆವನ್ನು ಕಲಿಸಿದ್ದಾನೆ ಎಂದು ನಿಮಗೆ ತಿಳಿಯುತ್ತದೆ. **ಇಹ್ದಿನಸ್ಸಿರಾತಲ್ ಮುಸ್ತಖೀಮ್ ಸಿರಾತಲ್ಲಝೀನ ಅನ್‌ಅಮ್‌ತ ಅಲೈಹಿಮ್ ಗೈರಿಲ್ ಮಗ್‌ಝೂಬಿ ಅಲೈಹಿಮ್ ವಲಝ್ಝಾಲ್ಲೀನ್**. (ಅಲ್‌ಫಾತಿಹ: 6, 7) ಅಂದರೆ ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು. ನಿನ್ನ ಅನುಗ್ರಹಕ್ಕೆ ಪಾತ್ರರಾದವರ, ಕ್ರೋಧಕ್ಕೆ ಈಡಾಗದವರ ಮತ್ತು ದಾರಿತಪ್ಪದವರ ಮಾರ್ಗದಲ್ಲಿ.

ದುಆ ಎಲ್ಲಾ ಪ್ರಯೋಜನಗಳು ಮತ್ತು ಆಸಕ್ತಿಗಳನ್ನು ಹೊಂದಿದ್ದರೆ ಮತ್ತು ಎಲ್ಲಾ ಹಾನಿಗಳಿಂದ ರಕ್ಷಿಸಿದರೆ ಮಾತ್ರ ಅದು ಸಮಗ್ರವಾಗಿರುತ್ತದೆ. ಆದ್ದರಿಂದ ಈ ದುಆ ದಲ್ಲಿ ಸಾಧ್ಯವಿರುವ ಎಲ್ಲಾ ಉತ್ತಮ ಪ್ರಯೋಜನಗಳು ಇವೆ ಮತ್ತು ದುಆ ಮನುಷ್ಯನನ್ನು ಕೊಲ್ಲುವ ಅತ್ಯಂತ ಹಾನಿಕಾರಕ ವಿಷವನ್ನು ತಪ್ಪಿಸುತ್ತದೆ ಇದರಲ್ಲಿ ಆ ದುಆವಿದೆ.

**ಮುನ್‌ಅಮ್ ಅಲೈಹ್** (ಅನುಗ್ರಹಕ್ಕೆ ಪಾತ್ರರಾದವರು) ನಾಲ್ಕು ರೀತಿಯ ಜನರಿದ್ದಾರೆ ಎಂದು ನಾನು ಪದೇ ಪದೇ ಹೇಳಿದ್ದೇನೆ. ಮೊದಲು ಪ್ರವಾದಿ. ಎರಡನೇಯದು ಸಿದ್ದೀಖ್, ಮೂರನೇಯದು ಶಹೀದ್(ಹುತಾತ್ಮರು), ನಾಲ್ಕನೇಯದು ಸಾಲಿಹೀನ್ (ನೀತಿವಂತರು). ಆದ್ದರಿಂದ ಈ ದುಆದಲ್ಲಿ ಈ ನಾಲ್ಕು ಗುಂಪುಗಳ ಪರಿಪೂರ್ಣತೆಗಳನ್ನು ಹೇಳಲಾಗಿದೆ.

**(ಮಲ್‌ಫೂಝಾತ್, ಸಂಪುಟ-1, ಪುಟ-372, 2018 ಖಾದಿಯಾನ್)**

**ಕಡಿಮೆ ಮಾತನಾಡುವುದು, ಕಡಿಮೆ ತಿನ್ನುವುದು ಮತ್ತು ಕಡಿಮೆ ನಿದ್ರೆ ಮಾಡುವುದು ಸೂಫಿಸಂನ ಆತ್ಮವಾಗಿದೆ ಎಂದು ಕೆಲವು ಸೂಫಿಗಳು ಹೇಳಿದ್ದಾರೆ ಮತ್ತು ರಮಝಾನ್ ಈ ಸೂಫಿಸಂನ ಸಾರವನ್ನು ಒಳಗೊಂಡಿದೆ.**

ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಉಪವಾಸದ ಒಂದು ದೊಡ್ಡ ಪ್ರಯೋಜನವೆಂದರೆ, ಅದು ಮನುಷ್ಯನ ಒಳ್ಳೆಯದಕ್ಕಾಗಿ ಕಷ್ಟಗಳನ್ನು ಸಹಿಸಿಕೊಳ್ಳುವ ಅಭ್ಯಾಸವನ್ನು ನೀಡುತ್ತದೆ. ಮನುಷ್ಯ ಜಗತ್ತಿನಲ್ಲಿ ಅನೇಕ ರೀತಿಯ

*(ಪುಟ ಸಂಖ್ಯೆ-07 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرٌّ مَا فِی الْعَالَمِ ✿ شَرُّ السُّمُوْمِ عَدَاوَۃُ الصُّلَحَاءِ

**ಧರ್ಮ ವಿರೋದಿಗಳು ಇಸ್ಲಾಮ್ ಧರ್ಮದ ವಿರೋಧವಾಗಿ ವರ್ತಿಸಲು, ಆರೋಪಿಸಲು ಮಸೀಹ್ ಮೌಊದ್(ಅ) ಅವರೇ ಕಾರಣ ಎಂದು ಸಾಬೀತುಪಡಿಸಿದರೆ ಅವರಿಗೆ ಒಂದು ಸಾವಿರ ರೂಪಾಯಿಗಳ ದೊಡ್ಡ ಬಹುಮಾನ.**

ಸಯ್ಯದ್ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಈ ವೈಭವಯುತ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ **"ಅಲ್‌ಬಲಾಗ್"** ರೂಹಾನಿ ಖಝಾಯಿನ್ ಸಂಪುಟ 13 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಹಿಂದಿನ ಸಂಚಿಕೆಯಲ್ಲಿ ನಾವು ಪ್ರಸ್ತಾಪಿಸಿದ್ದೆವು. ಓರ್ವ ಸ್ಥಳೀಯ ಪಾದರಿ ಅಹ್ಮದ್ ಶಾಹ್ ಅತ್ಯಂತ ಅಪಮಾನಕರವಾದ ಗ್ರಂಥ "ಉಮ್ಮಹಾತುಲ್ ಮೂಮಿನೀನ್" ವಿಷಯದಲ್ಲಿ ಅಂಜುಮನ್ ಹಿಯಾಯತೆ ಇಸ್ಲಾಂ ಲಾಹೋರ್ ಸರಕಾರಕ್ಕೆ ಕೇವಲ ದೂರು ಸಲ್ಲಿಸುವಷ್ಟೇ ಸೀಮಿತಗೊಂಡಿತ್ತು. ಅದರ ಉತ್ತರವನ್ನು ಬರೆಯಲು ಇಚ್ಛಿಸಲಿಲ್ಲ. ಅಗತ್ಯ ಎಂದು ಎಣಿಸಲಿಲ್ಲ. ಆಗ ನಾವು ಹಿಂದಿನ ಸಂಚಿಕೆಯಲ್ಲಿ ಸಯ್ಯದ್ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ನಿಲುವು ಮತ್ತು ಅಂಜುಮನ್ ಹಿಮಾಯತ್ ಇಸ್ಲಾಂ ಅವರ ನಡುವಿನ ಸ್ಥಿತಿಗತಿ ಸ್ವಲ್ಪಮಟ್ಟಿಗೆ ವಿವರಿಸಿದೆವು. ಈ ಸಂಚಿಕೆಯಲ್ಲಿ ನಾವು ಸಯ್ಯದ್ನಾ ಹಜ್‌ರತ್ ಮಸೀಹ್ ಮೌಊದ್(ಅ) ರವರ ಬಹುಮಾನದ ಪಂಥಾಹ್ವಾನ ಪ್ರಸ್ತುತಪಡಿಸಿದೆವು. ಅಂಜುಮನಿನ ಸಹವರ್ತಿಗಳು ಹುಝೂರ್(ಅ) ರವರ ಮೇಲೆ ಆರೋಪ ಹೊರಿಸಿದ್ದೇನೆಂದರೆ, ಇಸ್ಲಾಮ್ ಧರ್ಮದ ಮೇಲೆ ಇತರರು ಆರೋಪ ಮಾಡಲು ಕಾರಣ ಸ್ವಯಂ ಹಝ್ರತ್ ಮಸೀಹ್ ಮೌಊದ್ ಅವರೇ ಆಗಿದ್ದಾರೆ. ಅವರು ತನ್ನ ಗ್ರಂಥದಲ್ಲೂ ಅನ್ಯ ಸಮುದಾಯಗಳ ಕುರಿತು ಕಠಿಣ ಶಬ್ಧಗಳ ಪ್ರಯೋಗ ಮಾಡದಿರುತ್ತಿದ್ದರೆ ಅವರು ಸಹ ಕಠಿಣ ಭಾಷೆ ಬಳಸುತ್ತಿರಲಿಲ್ಲ. ಅವರುಗಳಿಗೆ ಆಥಮ ಮತ್ತು ಲೇಖರಾಮನ ಕುರಿತಾದ ಭವಿಷ್ಯವಾಣಿಗಳ ಬಗ್ಗೆಯೂ ಆಕ್ಷೇಪವಿತ್ತು. ಅದರಿಂದಾಗಿ ಗೊಂದಲ ಏರ್ಪಟ್ಟಿತ್ತು. ಈ ಪ್ರಯುಕ್ತ ಪೈಸಾ ಪತ್ರಿಕೆಯ ಸಂಪಾದಕರ ಹಾಗೂ ಅಬ್‌ಝುರ್ವರ್ ಅವರ ಆರೋಪಗಳನ್ನು ಉಲ್ಲೇಖಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

"ಪೈಸಾ ವಾರ್ತಾ ಪತ್ರಿಕೆಯ ಸಂಪಾದಕರು ಮತ್ತು ಅಬ್‌ಝುರ್‌ವರ್ ತಮ್ಮ ಪತ್ರಿಕೆಗಳಲ್ಲಿ ನನ್ನ ಮೇಲೆ ಆರೋಪ ಹೊರಿಸಿದ್ದಾರೆ. ಹಿಂದೂಗಳ ಮತ್ತು ಮುಸ್ಲಿಮರ ನಡುವೆ ದಂಗೆ ಗೊಂದಲಗಳಿಗೆ ನಾನೇ ಕಾರಣನಾಗಿದ್ದೇನೆ ಎಂದು. ನಾನು ಲೇಖರಾಮನ ಸಾವಿನ ಬಗ್ಗೆ ಭವಿಷ್ಯವಾಣಿ ಮಾಡಿದ್ದೆ. ಅವನ ಸಾವಿನ ನಂತರ ಹಿಂದೂಗಳಲ್ಲಿ ರೋಷ ಉಂಟಾಯಿತು ಮತ್ತು ಸಂಶಯಗಳು ಹುಟ್ಟಿಕೊಂಡವು. (ಅಲ್ ಬಲಾಗ್, ಫರ್ಯಾದೆ ದರ್ದ್, ರೂಹಾನಿ ಖಝಾಈನ್, ಸಂಪುಟ–13, ಪುಟ–406 ಅಡಿಟಿಪ್ಪಣಿ)

### ಉತ್ತರ ನೀಡುವ ಸಂದರ್ಭಗಳಲ್ಲಿ ನಾವು ಯಾವಾಗಲು ಮೃದು ಮತ್ತು ಸಭ್ಯ ಭಾಷೆಯನ್ನು ಬಳಸಿದೆವು.

ಪೈಸಾ ವಾರ್ತಾಪತ್ರಿಕೆಯ ಸಂಪಾದಕರ ಮತ್ತು ಆಬ್‌ಝುರ್‌ವರ್ ಅವರ ಆರೋಪಗಳ ಉತ್ತರ ಮತ್ತು ಸಯ್ಯದ್ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ವೈಭವಯುತ ಬಹುಮಾನದ ಪಂಥಾಹ್ವಾನಗಳ ಕುರಿತು ನಾವು ಅವರ ಪದಗಳನ್ನೇ ಪ್ರಸ್ತುತಪಡಿಸುತ್ತಿದ್ದೇವೆ.

ಅವರು ಹೇಳುತ್ತಾರೆ. ಹೌದು. ಅಲ್ಲಾಹನು ನಮ್ಮ ಮೇಲೆ ಕಡ್ಡಾಯಗೊಳಿದ್ದಾನೆ. ಸುಳ್ಳು ಆರೋಪಗಳನ್ನು ಜಾಣ್ಮೆಯಿಂದ ಮತ್ತು ಉತ್ತಮ ರೀತಿಯಲ್ಲಿ ರದ್ದುಗೊಳಿಸಬೇಕು. ಅಲ್ಲಾಹನು ಬಲ್ಲವನಾಗಿದ್ದಾನೆ. ಉತ್ತರ ನೀಡುವಾಗ ನಾವು ಎಂದೂ ಮೃದು ಭಾಷೆ ಮತ್ತು ಸಭ್ಯತೆಯನ್ನು ಕೈಬಿಡಲಿಲ್ಲ. ಯಾವಾಗಲೂ ಮೃದು ಮತ್ತು ಸಭ್ಯ ಪದಗಳನ್ನೇ ಬಳಸಿರುತ್ತೇವೆ. ಕೇವಲ ಕೆಲ ಸಂದರ್ಭಗಳಲ್ಲಿ ವಿರೋಧಗಳು ಅತ್ಯಂತ ಕಠಿಣ ಮತ್ತು ಕಿಡಿಗೇಡಿ ಬರಹಗಳನ್ನು ಬರೆದಾಗ ಅವರು ಎಚ್ಚೆತ್ತು ತಮ್ಮ ಪೈಶಾಚಿಕ ವರ್ತನೆ ಕೈಬಿಡಬೇಕು ಎಂಬ ಉದ್ದೇಶದಿಂದ ಸ್ವಲ್ಪ ಮಟ್ಟಿಗೆ ಪರಿಸ್ಥಿತಿಗೆ ಅನುಗುಣವಾಗಿ ಕಠಿಣತೆ ಬಳಸಿದ್ದೇನೆ. ಇದು ಯಾವುದೇ ರೀತಿಯಲ್ಲಿ ನನ್ನ ಆತ್ಮಸಂಬಂಧಿ ಭಾಷೆ ಅಲ್ಲ, ಬದಲು ಕೇವಲ **"ಉದ್‌ಉ ಇಲಾ ಸಬೀಲಿ ರಬ್ಬಿಕ ಬಿಲ್ ಹಿಕ್ಮತಿ ವಲ್ ಮೌಈಝತಿಲ್ ಹಸನತಿ ವಜಾದಿಲ್‌ಹುಮ್ ಬಿಲ್ಲತಿ ಹಿಯ ಅಹ್ಸನು"** ವಚನದಂತೆ ಜಾಣ್ಮೆಭರಿತ ಕರ್ಮವಾಗಿದೆ. ವಿರೋಧಿಗಳು ತಮ್ಮ ಎಲ್ಲೆಗಳನ್ನು ಮೀರಿ ಮಾತನಾಡಿದಾಗ, ಅವರು ನಮ್ಮ ಸರದಾರರು, ನೇತಾರರು ಸೃಷ್ಟಿಗೆ ಕಾರಣಕರ್ತರಾದ ಪ್ರವಾದಿ(ಸ) ಅವರ ಬಗ್ಗೆ ಅಂತಹ ಕೀಳುಮಟ್ಟದ ಮತ್ತು ದುಷ್ಟ ಪದಗಳನ್ನು ಬಳಸಿದಾಗ ಮಾತ್ರ. ಅದರಿಂದ ಸಮಾಜದಲ್ಲಿ ಅಶಾಂತಿ ಉಂಟಾಗುವ ಸಂಭವವಿದ್ದಾಗ ಜಾಣ್ಮೆಯಿಂದ ಈ ಕ್ರಮ ಕೈಗೊಂಡಿದ್ದೇನೆ. ಅವರ ಅಪವಿತ್ರ ತೀಕ್ಷ್ಣ ಆಕ್ರಮಣ ಪ್ರತಿಯಾಗಿ ಈ ಹಾದಿ ತುಳಿದಿರುತ್ತೇನೆ. ಅದೇ ಜಾಗದಲ್ಲಿ ಉಪದೇಶವು ಹೇಳಿರುತ್ತೇನೆ. ತಮ್ಮ ಸರಕಾರದ ಆದೇಶಗಳನ್ನು ಪಾಲಿಸಿರಿ ಮತ್ತು ಅನುಸರಿಸಿರಿ, ಪಾಶವಿಕ ನೀತಿಯನ್ನು ಕೈಬಿಡಿರಿ. ಹಾಗೆ ಅದೊಂದು ಜಾಣ್ಮೆಯ ನುಡಿಯಾಗಿತ್ತು. ಸಾರ್ವಜನಿಕ ಗೊಂದಲವನ್ನು ದಮನಿಸಲು ಕೆಲವೊಮ್ಮೆ ಸಂದರ್ಭೋಚಿತವಾಗಿ ಆ ರೀತಿ ವರ್ತಿಸಬೇಕಾಯಿತು. ಅದರಿಂದ ಇಸ್ಲಾಮ್ ಧರ್ಮದ ಪ್ರಜೆ ಉತ್ತೇಜನಗೊಂಡು ಪಾಶವಿಕ ಹಾದಿ ತುಳಿಯಬಾರದು ಎಂಬ ಉದ್ದೇಶವಾಗಿತ್ತು. ಅದು ಒಬ್ಬ ಮಧ್ಯವ್ಯಸನಿಗೆ ಔಷಧಿ ಕುಡಿಸುವ ರೀತಿಯಾಗಿದೆ. ಅದು ಮಧ್ಯಪಾನ ಬಿಡಿಸುವ ಒಂದು ವಿಧಾನವಾಗಿದೆ. ಅದರ ಹೊರತು ನಮ್ಮ ಮೇಲೆ ನಾವೆ ಕಠಿಣ ಭಾಷೆ ಪ್ರಯೋಗದ ಬುನಾದಿಯಾಗಿದ್ದೇವೆ ಎಂಬುದು ನಮ್ಮ ಮೇಲೆ ಎಸಗುವ ಘೋರ ದೌರ್ಜನ್ಯವಾಗಿದೆ. ಅದಕ್ಕೆ ನಾವು **"ಲಾನತುಲ್ಲಾಹಿ ಅಲಲ್–ಕಾಝಿಬೀನ್"** ಅಲ್ಲದೇ ಏನು ಉತ್ತರ ಕೊಡಬೇಕು.

### ಬರಾಹೀನೆ ಅಹ್ಮದಿಯಾ ಕ್ರೈಸ್ತರ ಮತ್ತು ಆರ್ಯರ ಉತ್ತರವಾಗಿ ಬರೆಯಲಾಗಿತ್ತು. ಅವರು ನಮ್ಮ ನಬಿ(ಸ) ರವರ ಪೈಕಿ ಅಪಮಾನ ಹಾಗೂ ಬೈಗಳಗಳು ಮಿತಿಮೀರಿದ್ದರು ಸಹ ಆ ಗ್ರಂಥದಲ್ಲಿ ಅತ್ಯಂತ ಮೃದುವಾದ ಮತ್ತು ಸಭ್ಯತೆಯನ್ನು ಪ್ರದರ್ಶಿಸಲಾಗಿತ್ತು.

ಸಯ್ಯದ್ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಈ ಬಗ್ಗೆ ಯಾರು ನ್ಯಾಯಯುತವಾಗಿ ತಮ್ಮ ಅಬಿಮತ ವ್ಯಕ್ತಪಡಿಸ ಬಯಸುತ್ತಾರೆ. ಅವರು ತಿಳಿಯಲು ಏನು ಕಷ್ಟವಾಗದು. ಲೋಕದಲ್ಲಿ ಪ್ರಕಟವಾದ ನಮ್ಮ ಪ್ರಥಮ ಗ್ರಂಥ "ಬರಾಹೀನೆ ಅಹ್ಮದಿಯಾ ಆಗಿದೆ. ಅದಕ್ಕಿಂತ ಮೊದಲು ಪಾದರಿ ಇಮಾಮುದ್ದೀನ್ ಅವರ ಅಪವಿತ್ರ ಗ್ರಂಥಗಳು ಮತ್ತು ಇಂದ್ರಮನ್ ಮುರಾದಾಬಾದಿ ಅವರ ಅತ್ಯಂತ ಕಠಿಣ ಹಾಗೂ ಅಶ್ಲೀಲತೆಯಿಂದ ಕೂಡಿದ ಬರಹಗಳು ಹಾಗೂ ದಯಾನಂದ ಅವರ "ಸತ್ಯ ಪ್ರಕಾಶ" ಗ್ರಂಥ ಅಪಶಬ್ಧ ಮತ್ತು ಅಶ್ಲೀಲ ಹಾಗೂ ಅವಹೇಳನದಿಂದ ತುಂಬಿ ಹೋಗಿತ್ತು. ದೇಶದಲ್ಲಿ ಪ್ರಕಟಗೊಂಡಿದ್ದವು. ಅದರಿಂದ ಈ ದೇಶದ ಮುಸಲ್ಮಾನರು ಎಷ್ಟೊಂದು ಆವೇಶಗೊಂಡಿದ್ದರೆಂದರೆ, ಬೆಂಕಿಯಲ್ಲಿ ಹೊತಿಟ್ಟ ಕಬ್ಬಿಣ ಬೆಂಕಿಯ ಕೆಂಡದ ರೀತಿಯಾಗಿತ್ತು. ಆದರೆ ನಾವು ಬರಾಹೀನ್ ಅಹ್ಮದಿಯಾದಿಂದ ತರ್ಕದ ಒಂದು ಹಿತವಾದ ಮಾದರಿಯಿಂದ ಅವರ ಆಕ್ರೋಶವನ್ನು ತಲ್ಲಣಗೊಳಿಸಿದ್ದೆವು ಮತ್ತು ಅವರ ಭಾವನೆಗಳನ್ನು ಬೇರೆಡೆ ತಿರುಗಿಸಿದೆವು. ಒಬ್ಬ ವೈದ್ಯನು ಗುಪ್ತಾಂಗಗಳಿಂದ ಅವನ ದೃಷ್ಟಿ ಬೇರೆಡೆ ತಿರುಗಿಸಿದಂತೆ. ಅಂದ ಹಾಗೆ ಬರಾಹೀನೆ ಅಹ್ಮದಿಯಾ ಕ್ರೈಸ್ತ ಮತ್ತು ಆರ್ಯರ ಉತ್ತರವಾಗಿ ಬರೆಯಲಾಗಿತ್ತು. ನಮ್ಮ ನಬಿ(ಸ) ರವರ ಕುರಿತು ಅವರ ಅವಹೇಳನ ಮತ್ತು ಬಯ್ಗಳಗಳು ಮಿತಿ ಮೀರಿಸಿದ್ದವು. ಆಗಲೂ ಸಹ ಆ ಗ್ರಂಥದಲ್ಲೇ ಅತ್ಯಂತ ಮೃದು ಹಾಗೂ ಸಭ್ಯ ಭಾಷೆಯನ್ನು ಬಳಸಲಾಗಿದೆ. ಸಂದರ್ಭಕ್ಕೆ ಅನುರೂಪವಾಗಿ ಅವರ ಆಕ್ರಮಣಗಳಿಗೆ ತಕ್ಕುದಾದ ಭಾಷೆ ಉಪಯೊಗಿಸಿದ ಹೊರತುಪಡಿಸಿ ಅದು ಪ್ರತಿಯೊಬ್ಬ ಎದುರಾಳಿಗಳಿಗೆ ತರ್ಕಕ್ಕೆ ಸರಿಯಾಗಿ ಬಳಸುವುದು ಅನಿವಾರ್ಯವಾಗುತ್ತದೆ. ಅದನ್ನು ಹೊರತುಪಡಿಸಿದರೆ ಯಾವ ಕಠಿಣ ಪದವು ಆ ಗ್ರಂಥದಲ್ಲಿಲ್ಲ. ಒಂದು ವೇಳೆ ಇದ್ದರೂ, ಯಾವನೇ ನ್ಯಾಯುವಂತನೂ ಅವನು ಇಮಾಮುದ್ದೀನ್ ಮತ್ತು ಇಂದ್ರಮನ್ ಹಾಗೂ ರನ್ಹಯ್ಯಲಾಲ್‌ರವ ಗ್ರಂಥಗಳು ಹಾಗೂ ದಯಾನಂದ ಅವರ ಸತ್ಯಪ್ರಕಾಶ ಸಹ ಓದಿದವರಾಗಿದ್ದಾರೆ. ಅವರಿಗೆ ನಮ್ಮ ಮೇಲೆ ಕಿಂಚಿತ್ತೂ ಸಹ ಆರೋಪ ಹೊರಿಸಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ನಾವು ಸಂದರ್ಭಸಹಿತ ಕೆಳಮಟ್ಟಕ್ಕೆ ಕಠಿಣತೆ ಬಳಸಿದ್ದೇವೆ. ಅವರ ಗ್ರಂಥದ ಅಶ್ಲೀಲತೆ ಮತ್ತು ಅವಹೇಳನದಿಂದ ಕೂಡಿದ ಗ್ರಂಥಗಳಿಗೆ ಹೋಲಿಸಿದರೆ ಸಾಸಿವೆಗೆ ಹೋಲಿಸಿದಂತಾಗುವುದು. ನಾವು ಏನೆಲ್ಲ ರಕ್ಷಣಾದೃಷ್ಟಿಯಿಂದ ಒಂದಿಷ್ಟು ಬರೆದಿದ್ದೇವೆ. ವಾಸ್ತವದಲ್ಲಿ ಅದು ವ್ಯಕ್ತಿಗಳ ದೋಷವಾಗಿತ್ತು. ಅವರು ತಮ್ಮ ಬರಹದಲ್ಲಿ ಅತ್ಯಂತ ಕಠಿಣತೆ ಬಳಸಿ ನಮ್ಮನ್ನು ಉತ್ತೇಜಿತಗೊಳಿಸಿದ್ದರು. ಉದಾಹರಣೆಗೆ ಒಬ್ಬನು ತುಂಟತನದಿಂದ ಮತ್ತೊಬ್ಬನಿಗೆ ನಿನ್ನ ತಂದೆ ಕೆಟ್ಟ ನಾಲಾಯಕ್ಕಾಗಿದ್ದ ಎಂದರೆ ಅವನು ಅದರ ಉತ್ತರವಾಗಿ ಅಲ್ಲ ನಿನ್ನ ತಂದೆಯೇ ಹಾಗಾಗಿದ್ದನು ಎಂದಂತೆ ಆಗ ಇಂತಹ ಪರಿಸ್ಥಿತಿಯಲ್ಲಿ ಎರಡನೆಯವನ ಮಾತು

*(ಪುಟ 07 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ನನ್ನ ತಂದೆಯನ್ನು ಖ಼ಲೀಫರನ್ನಾಗಿ ಮಾಡಲಾದಾಗ, ಎಂದರೆ ಅಲ್ಲಾಹನು ಅವರಿಗೆ ನೇತೃತ್ವ ಸ್ಥಾನವನ್ನು ಕೊಟ್ಟಾಗ, ಖಿ಼ಲಾಫತಿನ ಆರಂಭದಲ್ಲೇ ಅವರು ಎಲ್ಲ ರೀತಿಯ ಪಿತೂರಿಗಳ ಅಲೆ ಏಳುವುದನ್ನು, ಸುಳ್ಳುಪ್ರವಾದಿಗಳ ಕಾರ್ಯಚರಣೆಗಳನ್ನು ಮತ್ತು ಕಪಟವಿಶ್ವಾಸಿಗಳ ದಂಗೆಗಳನ್ನು ನೋಡಿದರು. ಅವರ ಮೇಲೆ ಎಷ್ಟು ವಿಪತ್ತುಗಳು ಬಂದೆರಿಗಿದುವು ಎಂದರೆ, ಅವುಗಳು ಪರ್ವತಗಳ ಮೇಲೆ ಬೀಳುತ್ತಿದ್ದರೆ, ಅವುಗಳು ನೆಲಸಮವಾಗಿ ಮಣ್ಣುಪಾಲಾಗುತ್ತಿದ್ದುವು. ಆದರೆ ಅವರಿಗೆ ಪ್ರವಾದಿಗಳಂತಹ ಸಹನೆಯನ್ನು ದಯಪಾಲಿಸಲಾಗಿತ್ತು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರ಼ತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರ಼ತ್ ಅಬೂಬಕರ್(ರ)ರಿಗೆ ಭೂಗೋಳಶಾಸ್ತ್ರದ ಸೂಕ್ಷ್ಮವಾದ ಅರಿವು ಇತ್ತು ಎಂದಾಗಿದೆ. ಅವರಿಗೆ ಜನವಸತಿ ಪ್ರದೇಶಗಳ ಮತ್ತು ಅರಬ್ ಭೂಖಂಡದ ರಸ್ತೆಗಳ ಸರಿಯಾದ ಅರಿವು ಇತ್ತು ಎಂದು ಇದರಿಂದ ಗೊತ್ತಾಗುತ್ತದೆ.**

**ಧರ್ಮತ್ಯಾಗಿಗಳ ಹಾವಳಿ ಹಾಗೂ ಬಂಡಾಯದ ನಡುವೆ ಕಳುಹಿಸಲ್ಪಟ್ಟ ಯೋಜನೆಗಳ ವಿವರಾತ್ಮಕ ಪ್ರಸ್ತಾವನೆ**

**ಹಝ್ರತ್ ಅಬುಬಕರ್(ರ) ಕಳುಹಿಸಿದ ಸೈನ್ಯಗಳು ಪರಸ್ಪರ ಸಂಬಂಧ ಹೊಂದಿದ್ದವು ಮತ್ತು ಇದು ಖಿಲಾಫತ್‌ನ ಪ್ರಮುಖ ಸಾಧನೆಗಳಲ್ಲಿ ಒಂದಾಗಿದೆ ಏಕೆಂದರೆ ಈ ಸೈನ್ಯಗಳಲ್ಲಿ ನಾಯಕತ್ವ ಕೌಶಲ್ಯದೊಂದಿಗೆ ಉತ್ತಮ ಸಂಘಟನೆ ಇತ್ತು.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ಼ತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **15–04–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيْمِ - بِسْمِ اللهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

إِيَّاكَ نَعْبُدُ وَإِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಕಳೆದ ಖುತ್ಬಕ್ಕೆ ಹಿಂದಿನ ಖುತ್ಬದಲ್ಲಿ ಹಝ್ರ಼ತ್ ಅಬೂಬಕರ್(ರ)ರ ಘಟನೆಗಳ ಕುರಿತು ಪ್ರಸ್ತಾಪಿಸುತ್ತಿದ್ದೆ. ಅದರಲ್ಲಿ ಅನೇಕ ಉಲ್ಲೇಖಗಳನ್ನು ಮುಂದಿರಿಸಿದ್ದೆ. ಧರ್ಮತ್ಯಾಗಿಗಳಿಗೆ ಅವರ ಧರ್ಮತ್ಯಾಗದ ಕಾರಣದಿಂದ ಹಝ್ರ಼ತ್ ಅಬೂಬಕರ್(ರ) ಶಿಕ್ಷೆ ನೀಡಿರಲಿಲ್ಲ ಬದಲಾಗಿ ವಿದ್ರೋಹ ಮತ್ತು ಯುದ್ಧ ಮಾಡಿದ ಕಾರಣದಿಂದ ಪ್ರತೀಕಾರವೆಂಬಂತೆ ಅವರನ್ನು ಶಿಕ್ಷಿಸಲಾಗಿತ್ತು ಎಂದು ಈ ಉಲ್ಲೇಖಗಳಿಂದ ಸಾಬೀತಾಗುತ್ತಿದೆ. ಈ ಕುರಿತು ಕಾಲಘಟ್ಟದ ನೀತಿವಂತರಾದ ಇಮಾಂ ಹಝ್ರ಼ತ್ ಮಸೀಹ್ ಮೌಊದ್(ಅ) ಕೂಡ ಹಝ್ರ಼ತ್ ಅಬೂಬಕರ್(ರ)ರ ಖಿ಼ಲಾಫತ್ ಕಾಲದ ಧರ್ಮತ್ಯಾಗವು ಸತ್ಯದಲ್ಲಿ ವಿದ್ರೋಹ ಮತ್ತು ಕುಚೇಷ್ಟೆಯಾಗಿತ್ತು ಎಂದು ವಿವರಿಸಿರುವರು.

ಹಝ್ರ಼ತ್ ಅಬೂಬಕರ್(ರ)ರ ಧೀರತೆ ಎಂತದ್ದಾಗಿತ್ತು ಎಂಬುದರ ಜೊತೆಗೆ ಇದರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರ಼ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರ಼ತ್ ಅಬೂಬಕರ್(ರ)ರ ಖಿ಼ಲಾಫತಿನ ಕಾಲಘಟ್ಟವು ಭಯ ಮತ್ತು ಆಪತ್ತುಗಳ ಸಮಯವಾಗಿತ್ತು ಎಂಬುದು ಸತ್ಯಾನ್ವೇಷಕರಿಗೆ ಸಂಶೋಧಕರಿಗೆ ಗೊತ್ತಿರುವ ಸಂಗತಿಯಾಗಿದೆ. ಹಝ್ರ಼ತ್ ಪೈಗಂಬರ್(ಸ) ನಿಧನರಾದಾಗ ಇಸ್ಲಾಂ ಮತ್ತು ಮುಸ್ಲಿಮರ ಮೇಲೆ ಆಪತ್ತುಗಳು ಬಂದೆರಗಿತು. ಅನೇಕ ಕಪಟವಿಶ್ವಾಸಿಗಳು ಧರ್ಮತ್ಯಾಗಿಗಳಾದರು. ಧರ್ಮತ್ಯಾಗಿಗಳು ದೊಡ್ಡ ದೊಡ್ಡ ಮಾತುಗಳನ್ನಾಡಲು ತೊಡಗಿದರು. ಸುಳ್ಳುವಾದಿಗಳ ಒಂದು ಗುಂಪು ಪ್ರವಾದಿತ್ವವನ್ನು ವಾದಿಸಿದರು. ಅನೇಕ ಗ್ರಾಮವಾಸಿಗಳು ಸುಳ್ಳುವಾದಿಗಳ ಜೊತೆಗೆ ಸೇರಿದರು. ಎಲ್ಲಿಯ ವರೆಗೆ ಎಂದರೆ, ಮುಸೈಲಿಮ ಕದ್ಧಾಬ್‌ರ ಜೊತೆಗೆ ಸುಮಾರು ಒಂದು ಲಕ್ಷದಷ್ಟು ಮೂಢ ಮತ್ತು ದುಸ್ವಭಾವಿಗಳಾದ ಜನರು ಸೇರಿದರು. ಪಿತೂರಿಗಳು ಮತ್ತು ಆಪತ್ತುಗಳು ವರ್ಧಿಸಿದುವು. ಆಪತ್ತುಗಳು ಸಮೀಪ ಮತ್ತು ದೂರ ಪ್ರದೇಶಗಳಲ್ಲಿ ವ್ಯಾಪಿಸಿದುವು. ಸತ್ಯವಿಶ್ವಾಸಿಗಳ ಮೇಲೆ ಕಠಿಣವಾದ ಭೂಕಂಪದ ಸ್ಥಿತಿಯುಂಟಾಯಿತು. ಆ ಸಮಯದಲ್ಲಿ ಎಲ್ಲರೂ ಪರೀಕ್ಷಿಸಲ್ಪಟ್ಟರು. ಭಯಾನಕ ಮತ್ತು ಮೂರ್ಛೆಹೋಗುವಂತಹ ಅವಸ್ಥೆಗಳು ಪ್ರಕಟಗೊಂಡುವು. ಸತ್ಯವಿಶ್ವಾಸಿಗಳು ಎಷ್ಟು ನಿಸ್ಸಹಾಯಕರಾಗಿದ್ದರು ಎಂದರೆ, ಅವರ ಹೃದಯಗಳಲ್ಲಿ ಬೆಂಕಿಯ ಕೆಂಡಗಳು ಉರಿಯಲು ಶುರುವಾಗಿದ್ದುವು ಅಥವಾ ಅವರನ್ನು ಚೂರಿಯಿಂದ ಕೊಯ್ಯಲಾದ ಸ್ಥಿತಿಯುಂತಾಗಿತ್ತು. ಕೆಲವೊಮ್ಮೆ ಅವರು ಸೃಷ್ಟಿಗಳಲ್ಲಿ ಶ್ರೇಷ್ಠರಾದ ಹಝ್ರ಼ತ್ ಪೈಗಂಬರ್(ಸ)ರ ಅಗಲುವಿಕೆಯ ಕಾರಣದಿಂದ ಮತ್ತು ಕೆಲವೊಮ್ಮೆ ಸುಟ್ಟು ಭಸ್ಮಗೊಳಿಸುವ ಬೆಂಕಿಯ ರೂಪದಲ್ಲಿ ಪ್ರಕಟಗೊಂಡಿದ್ದ ಈ ಪಿತೂರಿಗಳ ಕಾರಣದಿಂದ ಅವರು ಅಳುತ್ತಿದ್ದರು. ಶಾಂತಿ ಸಮಾಧಾನ ಕಿಂಚಿತ್ತೂ ಇರಲಿಲ್ಲ. ಕಸದ ರಾಶಿಯ ನಡುವೆ ಬೆಳೆದ ಹುಲ್ಲುಗಳಂತೆ ಪಿತೂರಿಗಾರರು ಎಲ್ಲೆಡೆ ಇದ್ದರು. ಸತ್ಯವಿಶ್ವಾಸಿಗಳ ಭಯ ಮತ್ತು ಗಾಬರಿ ಬಹಳ ವರ್ಧಿಸಿತ್ತು. ಹೃದಯಗಳು ಭಯ ಮತ್ತು ಅಸಮಾಧಾನದಿಂದ ತುಂಬಿದುವು. ಅಂತಹ ಸ್ಥಿತಿಯಲ್ಲಿ ಹಝ್ರ಼ತ್ ಅಬೂಬಕರ್(ರ)ರನ್ನು ಕಾಲಘಟ್ಟದ ಅಧಿಕಾರಿ ಮತ್ತು ಹಝ್ರ಼ತ್ ಪೈಗಂಬರ್(ಸ)ರ ಖ಼ಲೀಫರನ್ನಾಗಿ ಮಾಡಲಾಯಿತು. ಕಪಟವಿಶ್ವಾಸಿಗಳು, ಸತ್ಯನಿಷೇಧಿಗಳು ಮತ್ತು ಧರ್ಮತ್ಯಾಗಿಗಳು ತೋರಿಸುತ್ತಿದ್ದ ವರ್ತನೆ ಮತ್ತು ನಡವಳಿಕೆಯನ್ನು ನೋಡಿದಾಗ ಅವರು ದುಃಖದಲ್ಲಿ ಮುಳುಗಿದರು. ಅವರು ಬಹಳವಾಗಿ ಅಳುತ್ತಿದ್ದರು ಮತ್ತು ಅವರ ಕಣ್ಣೀರು ಚಿಲುಮೆಯ ಹಾಗೆ ಹರಿಯುತ್ತಿತ್ತು. ಅವರು ಇಸ್ಲಾಂ ಮತ್ತು ಮುಸ್ಲಿಮರ ಒಳಿತಿಗಾಗಿ ಅಲ್ಲಾಹನಲ್ಲಿ ದುಆ ಮಾಡುತ್ತಿದ್ದರು. ಹಝ್ರ಼ತ್ ಆಯಿಶ(ರ) ವರದಿ ಮಾಡುತ್ತಾರೆ:

ನನ್ನ ತಂದೆಯನ್ನು ಖ಼ಲೀಫರನ್ನಾಗಿ ಮಾಡಲಾದಾಗ, ಎಂದರೆ ಅಲ್ಲಾಹನು ಅವರಿಗೆ ನೇತೃತ್ವ ಸ್ಥಾನವನ್ನು ಕೊಟ್ಟಾಗ, ಖಿ಼ಲಾಫತಿನ ಆರಂಭದಲ್ಲೇ ಅವರು ಎಲ್ಲ ರೀತಿಯ ಪಿತೂರಿಗಳ ಅಲೆ ಏಳುವುದನ್ನು, ಸುಳ್ಳುಪ್ರವಾದಿಗಳ ಕಾರ್ಯಚರಣೆಗಳನ್ನು ಮತ್ತು ಕಪಟವಿಶ್ವಾಸಿಗಳ ದಂಗೆಗಳನ್ನು ನೋಡಿದರು. ಅವರ ಮೇಲೆ ಎಷ್ಟು ವಿಪತ್ತುಗಳು ಬಂದೆರಿಗಿದುವು ಎಂದರೆ, ಅವುಗಳು ಪರ್ವತಗಳ ಮೇಲೆ ಬೀಳುತ್ತಿದ್ದರೆ, ಅವುಗಳು ನೆಲಸಮವಾಗಿ ಮಣ್ಣುಪಾಲಾಗುತ್ತಿದ್ದುವು. ಆದರೆ ಅವರಿಗೆ ಪ್ರವಾದಿಗಳಂತಹ ಸಹನೆಯನ್ನು ದಯಪಾಲಿಸಲಾಗಿತ್ತು."

ಹಝ್ರ಼ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಕೊನೆಗೆ ಅಲ್ಲಾಹನ ಸಹಾಯ ತಲುಪಿತು ಹಾಗೂ ಸುಳ್ಳುಪ್ರವಾದಿಗಳನ್ನು ಮತ್ತು ಧರ್ಮತ್ಯಾಗಿಗಳನ್ನು ನಾಶಮಾಡಲಾಯಿತು. ಪಿತೂರಿಗಳನ್ನು ದೂರ ಮಾಡಲಾಯಿತು. ವಿಪತ್ತುಗಳು ಇಲ್ಲವಾದುವು. ಸಂಗತಿಗಳ ತೀರ್ಮಾನವಾಯಿತು. ಖಿ಼ಲಾಫತಿನ ವಿಷಯ ಸುದೃಢಗೊಂಡಿತು ಮತ್ತು ಅಲ್ಲಾಹನು ಸತ್ಯವಿಶ್ವಾಸಿಗಳನ್ನು ಆಪತ್ತುಗಳಿಂದ ರಕ್ಷಿಸಿದನು ಹಾಗೂ ಅವರ ಭಯದ ಸ್ಥಿತಿಯನ್ನು ನೆಮ್ಮದಿಯನ್ನಾಗಿ ಬದಲಾಯಿಸಿದನು. ಅವರಿಗೆ ಅವರ ಧರ್ಮವನ್ನು ಸುದೃಢಗೊಳಿಸಿದನು. ಒಂದು ಲೋಕವನ್ನೇ ಸತ್ಯದಲ್ಲಿ ನೆಲೆನಿಲ್ಲಿಸಿದನು. ಪಿತೂರಿಗಾರರ ಮುಖಗಳಲ್ಲಿ ಇರುಳು ಕವಿಯಿತು. ಅಲ್ಲಾಹನು ತನ್ನ ವಾಗ್ದಾನವನ್ನು ಈಡೇರಿಸಿದನು. ತನ್ನ ದಾಸನಾದ ಹಝ್ರ಼ತ್ ಅಬೂಬಕರ್(ರ)ರಿಗೆ ನೆರವಾದನು. ದುಷ್ಟರಾದ ನೇತಾರರನ್ನು

ಮತ್ತು ವಿಗ್ರಹಗಳನ್ನು ನಾಶಮಾಡಿದನು. ಸತ್ಯನಿಷೇಧಿಗಳ ಹೃದಯಗಳಲ್ಲಿ ಎಂತಹ ಭಯ ಹುಟ್ಟಿಸಿದನು ಎಂದರೆ, ಅವರು ಹಿಂದೆ ಸರಿದರು. ಕೊನೆಗೆ ಅವರು ಹಿಂದೆಸರಿದು ಪಶ್ಚಾತ್ತಾಪ ಮಾಡಿದರು. ಇದೇ ಸರ್ವಶಕ್ತನಾದ ಅಲ್ಲಾಹನ ವಾಗ್ದಾನವಾಗಿತ್ತು. ಅವನು ಎಲ್ಲ ಸತ್ಯವಂತರಿಗಿಂತ ಸತ್ಯವಂತನಾಗಿದ್ದಾನೆ. ಒಟ್ಟಿನಲ್ಲಿ ಯೋಚಿಸಿರಿ, ಹೇಗೆ ಖ಼ಿಲಾಫತಿನ ವಾಗ್ದಾನ ತನ್ನ ಎಲ್ಲ ಸಂಗತಿಗಳೊಂದಿಗೆ ಮತ್ತು ಲಕ್ಷಣಗಳೊಂದಿಗೆ ಹಝ್ರತ್ ಅಬೂಬಕರ್(ರ)ರಲ್ಲಿ ಈಡೇರಿದುವು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಚಿಂತಿಸಿರಿ, ಹಝ್ರತ್ ಅಬೂಬಕರ್(ರ) ಖ಼ಲೀಫರಾದಾಗ ಮುಸ್ಲಿಮರ ಸ್ಥಿತಿಯೇನಾಗಿತ್ತು ಎಂದು ಯೋಚಿಸಿರಿ. ಇಸ್ಲಾಂ ವಿಪತ್ತುಗಳ ಕಾರಣದಿಂದ ಬೆಂಕಿಯಿಂದ ಸುಡಲ್ಪಟ್ಟ ವ್ಯಕ್ತಿಯ ಹಾಗೆ ನೋವು ಅನುಭವಿಸುತ್ತಿತ್ತು. ಅನಂತರ ಅಲ್ಲಾಹನು ಇಸ್ಲಾಮಿಗೆ ಅದರ ಶಕ್ತಿಯನ್ನು ಮರಳಿ ಕೊಟ್ಟನು. ಅದನ್ನು ಆಳವಾದ ಬಾವಿಯಿಂದ ಹೊರಗೆ ತೆಗೆದನು. ಸುಳ್ಳುಪ್ರವಾದಿಗಳು ವೇದನಾಜನಕ ಶಿಕ್ಷೆಯಿಂದ ಕೊಲ್ಲಲ್ಪಟ್ಟರು. ಧರ್ಮತ್ಯಾಗಿಗಳು ಜಾನುವಾರುಗಳ ಹಾಗೆ ನಾಶವಾದರು. ಸಾವಿನಂತಹ ಭಯದಿಂದ ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ಸಮಾಧಾನ ನೀಡಿದನು. ಈ ಕಷ್ಟತೆಗಳು ದೂರವಾದಾಗ ಸತ್ಯವಿಶ್ವಾಸಿಗಳು ಸಂತೋಷಗೊಳ್ಳುತ್ತಿದ್ದರು. ಹಝ್ರತ್ ಅಬೂಬಕರ್(ರ)ರಿಗೆ ಶುಭಾಶಯ ಹಾರೈಸುತ್ತಿದ್ದರು. ಸುಸ್ವಾಗತವೆಂದು ಹೇಳಿ ಅವರನ್ನು ಭೇಟಿಯಾಗುತ್ತಿದ್ದರು. ಅವರನ್ನು ಹೊಗಳುತ್ತಿದ್ದರು ಮತ್ತು ಪ್ರಭುಗಳ ಪ್ರಭುವಾದ ಅಲ್ಲಾಹನಲ್ಲಿ ಅವರಿಗಾಗಿ ದುಆ ಮಾಡುತ್ತಿದ್ದರು. ಹಝ್ರತ್ ಅಬೂಬಕರ್(ರ)ರನ್ನು ಸಭ್ಯತೆಯಿಂದ ಗೌರವಿಸಲು ಮುಂದಾಗುತ್ತಿದ್ದರು. ಸಹಾಬರು ಹಝ್ರತ್ ಅಬೂಕಬಕರ್(ರ)ರೊಂದಿಗೆ ಇದ್ದ ಪ್ರೀತಿಯನ್ನು ಹೃದಯದ ಆಳದಲ್ಲಿ ಪ್ರವೇಶಿಸಿಕೊಂಡಿದ್ದರು. ಎಲ್ಲ ಸಂಗತಿಗಳಲ್ಲಿ ಅವರನ್ನು ಅನುಸರಿಸುತ್ತಿದ್ದರು. ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದರು. ಅವರು ತಮ್ಮ ಹೃದಯಗಳನ್ನು ಬೆಳಗಿಸಿದರು ಮತ್ತು ಮುಖಗಳನ್ನು ಹೊಳಪಿಸಿದರು. ಪ್ರೀತಿ ಮತ್ತು ಪ್ರೇಮದಲ್ಲಿ ವರ್ಧಿಸಿಕೊಂಡರು. ಪರಿಪೂರ್ಣ ಕಠಿಣ ಪ್ರಯತ್ನದಿಂದ ಅವರನ್ನು ಅನುಸರಿಸಿದರು. ಹಝ್ರತ್ ಅಬೂಬಕರ್(ರ)ರನ್ನು ಸಹಾಬರು ಒಬ್ಬ ಅನುಗ್ರಹೀತ ವ್ಯಕ್ತಿ ಮತ್ತು ಪ್ರವಾದಿಗಳಂತೆ ಅಲ್ಲಾಹನ ಸಹಾಯ ಲಭಿಸುತ್ತಿರುವ ವ್ಯಕ್ತಿಯೆಂದು ಅರಿತುಕೊಂಡಿದ್ದರು. ಇವೆಲ್ಲವೂ ಹಝ್ರತ್ ಅಬೂಬಕರ್(ರ)ರ ಸತ್ಯಸಂಧತೆ ಮತ್ತು ಗಾಢವಾದ ದೃಢವಿಶ್ವಾಸದ ಕಾರಣದಿಂದ ಆಗಿತ್ತು. (ಸಿರ್‌ರುಲ್ ಖಿಲಾಫ ಉರ್ದು ಅನುವಾದ, ನಝ಼ಾರತ್ ಇಶಾಅತ್, ಪುಟ–47–51)

ಮೇಲಿನ ಉಲ್ಲೇಖವು ಹಝ್ರತ್ ಮಸೀಹ್ ಮೌಊದ್(ಅ)ರ ಅರಬಿ ಗ್ರಂಥವಾದ ಸಿರ್ರುಲ್‌ಖ಼ಿಲಾಫದ ಉರ್ದು ತರ್ಜುಮೆಯಾಗಿದೆ.

ಧರ್ಮತ್ಯಾಗದ ಪಿತೂರಿ ಮತ್ತು ದಂಗೆ ಎದ್ದಾಗ ಅದನ್ನು ಎದುರಿಸಲಿಕ್ಕಾಗಿ ಹಝ್ರತ್ ಅಬೂಬಕರ್(ರ) ಕೆಲವು ಸೈನ್ಯವನ್ನು ಕಳುಹಿಸಿದ್ದರು. ಅದರ ಪ್ರಸ್ತಾಪ ಹಿಂದೆಯೂ ಹೇಳಿದ್ದೆ. ಹಝ್ರತ್ ಪೈಗಂಬರ್(ಸ)ರ ನಧನದ ನಂತರ ಬಹುತೇಕ ಪೂರ್ತಿ ಅರೇಬಿಯರು ಧರ್ಮತ್ಯಾಗಿ ಮಾಡಿದ್ದರು. ಕೆಲವು ಜನರು ಕೇವಲ ಝ಼ಕಾತ್ ನೀಡುವುದನ್ನು ನಿರಾಕರಿಸಿದ್ದರು. ಅವರ ವಿರುದ್ಧ ಹಝ್ರತ್ ಅಬೂಬಕರ್(ರ) ಮಾಡಿದ ಚಟುವಟಿಕೆಗಳನ್ನು ಮೊದಲು ಪ್ರಸ್ತಾಪಿಸಿದ್ದೆ.

ಮತ್ತೊಂದು ಗುಂಪಿನ ಪ್ರಸ್ತಾಪ ಹೀಗೆ ಬರುತ್ತದೆ. ಅವರು ಇಸ್ಲಾಂ ಧರ್ಮವನ್ನು ತ್ಯಜಿಸಿದರು ಎಂದು ಮಾತ್ರವಲ್ಲ. ದಂಗೆಯನ್ನು ಕೂಡ ಎಬ್ಬಿಸಿದ್ದರು ಮತ್ತು ಮುಸ್ಲಿಮರನ್ನು ವಧಿಸುತ್ತಲೂ ಇದ್ದರು. ಈಗ ಹಝ್ರತ್ ಅಬೂಬಕರ್(ರ) ಅವರನ್ನು ಸರಿಪಡಿಸಲು ದೃಢನಿರ್ಧಾರ ಮಾಡಿದ್ದರು. ಬದಾಯ ನಹಾಯದಲ್ಲಿ ಹೀಗೆ ಬರೆಯಲಾಗಿದೆ. ಹಝ್ರತ್ ಉಸಾಮರ ಸೈನ್ಯ ತನ್ನ ಕಾರ್ಯವನ್ನು ಮುಗಿಸಿ ಬಂದ ನಂತರ ಹಝ್ರತ್ ಅಬೂಬಕರ್(ರ) ಇಸ್ಲಾಮಿನ ಸೈನ್ಯಗಳೊಂದಿಗೆ ಖಡ್ಗವನ್ನು ಎತ್ತಿಕೊಂಡು ಮದೀನದಿಂದ ದ್ಝ಼ುಲ್‌ಖುಸ್ಸದ ಕಡೆಗೆ ರವಾನೆಯಾದರು. ಅದು ಮದೀನದಿಂದ ಒಂದು ರಾತ್ರಿ ಮತ್ತು ಒಂದು ದಿನದ ಯಾತ್ರೆಯ ದೂರದಲ್ಲಿತ್ತು. ಆ ಕಾಲದಲ್ಲಿ ಮಾಡುತ್ತಿದ್ದ ಯಾತ್ರೆಯ ಪ್ರಕಾರ. ಹಝ್ರತ್ ಅಲಿ(ರ) ಕೂಡ ಒಳಗೊಂಡಿದ್ದ ಸಹಾಬಿಯರ ಸಂಘವು ಹಝ್ರತ್ ಅಬೂಬಕರ್(ರ)ರೊಡನೆ ಹೀಗೆ ಒತ್ತಾಯಪಡಿಸುತ್ತಿದ್ದರು: ನೀವು ಮದೀನಕ್ಕೆ ಮರಳಿ ಹೋಗಿರಿ. ಗ್ರಾಮವಾಸಿಗಳೊಂದಿಗೆ ಯುದ್ಧ ಮಾಡಲಿಕ್ಕಾಗಿ ನಿಮ್ಮ ಬದಲಾಗಿ ಬೇರೆ ಯಾರಾದರೂ ಶೂರನನ್ನು ಕಳುಹಿಸಿರಿ. ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ನನ್ನ ತಂದೆ ಖಡ್ಗವನ್ನು ಎತ್ತಿಕೊಂಡು ಸವಾರಿಮೃಗದಲ್ಲಿ ಸವಾರರಾಗಿ ಹೊರಟಾಗ ಹಝ್ರತ್ ಅಲಿ ಬಿನ್ ಅಬೀತಾಲಿಬ್ ಬಂದು ನನ್ನ ತಂದೆಯ ಒಂಟೆಯ ಲಗಾಮನ್ನು ಹಿಡಿದರು ಮತ್ತು ಹೀಗೆ ಹೇಳಿದರು: ಎಲ್ಲೈ ಖ಼ಲೀಫತುರ್‌ರಸೂಲುಲ್ಲಾಹ್, ಹಝ್ರತ್ ಪೈಗಂಬರ್(ಸ) ಉಹದ್ ಯುದ್ಧದ ದಿನದಂದು ಹೇಳಿದ ಮಾತನ್ನು ನಾನು ನಿಮ್ಮೊಡನೆ ಹೇಳುತ್ತೇನೆ. ನೀವೇಕೆ ಖಡ್ಗವನ್ನು ಎತ್ತಿಕೊಂಡಿದ್ದೀರಿ. ನಮ್ಮನ್ನು ನಿಮ್ಮ ಜೀವದ ಮೂಲಕ ವಿಪತ್ತಿಗೆ ಹಾಕಬೇಡಿರಿ. ಅಲ್ಲಾಹನಾಣೆ, ನಿಮ್ಮ ಮರಣದ ವಿಪತ್ತು ನಮಗೆ ತಲುಪಿದರೆ, ನಿಮ್ಮ ನಂತರ ಸದಾ ಕಾಲಕ್ಕೆ ಇಸ್ಲಾಮಿನ ವ್ಯವಸ್ಥೆ ಇರದು. ಆಗ ಹಝ್ರತ್ ಅಬೂಬಕರ್(ರ) ಮರಳಿ ಬಂದರು ಮತ್ತು ಸೈನ್ಯವನ್ನು ಕಳುಹಿಸಿದರು. (ಅಲ್‌ಬದಾಯ ವನ್ನಹಾಯ, ಸಂಪುಟ–3, ಭಾಗ–6, ಪುಟ–311–312, ದಾರುಲ್ ಕುತುಬ್ ಇಲ್‌ಮಿಯ)

ಹಝ್ರತ್ ಉಸಾಮ ಮತ್ತು ಅವರ ಸೈನ್ಯ ಆರಾಮ ಮಾಡಿದಾಗ ಮತ್ತು ಅವರ ಸವಾರಿಮೃಗಗಳು ಕೂಡ ಆರಾಮ ಮಾಡಿ ಚುರುಕುಗೊಂಡಾಗ ಹಾಗೂ ಝ಼ಕಾತಿನ ಸಂಪತ್ತು ಕೂಡ ಮುಸ್ಲಿಮರ ಆವಶ್ಯಕ್ಕಿಂತ ಬಹಳಷ್ಟು ಹೆಚ್ಚಾದಾಗ ಹಝ್ರತ್ ಅಬೂಬಕರ್(ರ) ವಿದ್ರೋಹಿಗಳನ್ನು ಬೇರುಸಹಿತ ಕಿತ್ತುಹಾಕಲಿಕ್ಕಾಗಿ ಸೈನ್ಯವನ್ನು ವಿಂಗಡಿಸಿದರು. ಹನ್ನೊಂದು ಸೇನಾಧಿಪತಿಗಳಿಗೆ ಇಸ್ಲಾಮಿನ ಧ್ವಜಗಳನ್ನು ನೀಡಿ ವಿವಿಧ ಪ್ರದೇಶಗಳಿಗೆ ಯುದ್ಧಕ್ಕಾಗಿ ಕಳುಹಿಸಿದರು.

ಹಝ್ರತ್ ಖ಼ಾಲಿದ್ ಬಿನ್ ವಲೀದ್‌ರೊಡನೆ ತುಲೈಹ ಬಿನ್ ಖ಼ುವೈಲಿದ್ ಮತ್ತು ಬತ್ತಾಹ್ ಮಾಲಿಕ್ ಬಿನ್ ನುವೈರರ ವಿರುದ್ಧ, ಹಝ್ರತ್ ಇಕ್ರಿಮ ಬಿನ್ ಅಬೂಜಹಲ್‌ರೊಡನೆ ಮುಸೈಲಿಮರ ವಿರುದ್ಧ, ಹಝ್ರತ್ ಮುಹಾಜಿರ್ ಬಿನ್ ಅಬೂ ಉಮಯ್ಯರೊಡನೆ ಅನ್ಸಿಯರ ಸೈನ್ಯ, ಖೈಸ್ ಬಿನ್ ಮಕ್‌ಶೂಹ್ ಮತ್ತು ಕುಂದರ ವಿರುದ್ಧ, ಹಝ್ರತ್ ಖ಼ಾಲಿದ್ ಬಿನ್ ಸಈದ್ ಬಿನ್ ಆಸ್‌ರೊಡನೆ ಹಮ್‌ಖತೀನ್ ಹೋಗಲು, ಹಝ್ರತ್ ಅಮ್ರ್ ಬಿನ್ ಆಸ್‌ರೊಡನೆ ಖ಼ುಝ಼ಾಅ ವದೀಅ ಮತ್ತು ಹಾರಿಸ್‌ರ ಗುಂಪುಗಳ ವಿರುದ್ಧ, ಹಝ್ರತ್ ಹುದೈಫ ಬಿನ್ ಮುಹ್‌ಸಿನ್ ಗ಼ಲ್‌ಫಾನಿಯೊಡನೆ ಅಹ್ಲೇ ದುಬಾರ ಬಳಿಗೆ ಹೋಗಲು, ಹಝ್ರತ್ ಉರ್‌ಜಃ ಹರ್‌ಸಿಮರೊಡನೆ ಮೊಹ್‌ರಗೆ ಹೋಗಲು, ಹಝ್ರತ್ ಶರಹ್‌ಬೀಲ್ ಬಿನ್ ಹಸನರೊಡನೆ ಯಮಾಮ ಮತ್ತು ಖ಼ುಝ಼ಾದ ಕಡೆಗೆ ಹೋಗಲು, ಹಝ್ರತ್ ತರೀಫ ಬಿನ್ ಹಾಜಿರ್‌ಝ್‌ರೊಡನೆ ಬನೂ ಸಲೀಂ ಮತ್ತು ಹವಾಝ಼ುನ್ ವಿರುದ್ಧ, ಹಝ್ರತ್ ಸುವೈದ್ ಬಿನ್ ಮಖ್‌ರನ್ ತಹಾಮದ ಕಡೆಗೆ ಹೋಗಲು ಮತ್ತು ಹಝ್ರತ್ ಉಲಾ ಬಿನ್ ಹಝ್ರಮಿರೊಡನೆ ಬಹ್‌ರೈನಿನಲ್ಲಿರುವ ವಿದ್ರೋಹಿಗಳ ವಿರುದ್ಧ ಹೋರಾಡಲು ಆದೇಶಿಸಿದರು. (ತಾರೀಖ್ ಅತ್ತಬರಿ, ಸಂಪುಟ–2, ಪಉಟ–257, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012) (ಸಯ್ಯದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ವ ಕಾರ್ನಾಮೆ, ಪುಟ–288, ಅಲ್‌ಫುರ್ಖಾನ್ ಮುಝ಼ಫ್ಫರ್ ಗಡ್ ಪಾಕಿಸ್ತಾನ್) (ಮುಜಮುಲ್ ಬಲದಾನ್, ಸಂಪುಟ–1, ಪುಟ–527, ಸಂಪುಟ–2, ಪುಟ–270,311,496)

ಪ್ರತಿಯೊಂದು ಸಂಘದ ಸೇನಾಧಿಪತಿಗಳಿಗೆ ಹಝ್ರತ್ ಅಬೂಬಕರ್(ರ) ಹೀಗೆ ಆದೇಶ ನೀಡಿದರು: ನೀವು ದಾಟಿಹೋಗುವ ಪ್ರದೇಶಗಳಿಂದ ಶಕ್ತಿಶಾಲಿ ಮುಸ್ಲಿಮರನ್ನು ತಮ್ಮ ಜೊತೆಗೆ ಸೇರಿಸಿರಿ ಮತ್ತು ಕೆಲವು ಸಮರ್ಥ ವ್ಯಕ್ತಿಗಳನ್ನು ಅಲ್ಲೇ ತಮ್ಮ ಪ್ರದೇಶಗಳ ಸಂರಕ್ಷಣೆಗಾಗಿ ಬಿಟ್ಟುಬಿಡಿರಿ. (ತಾರೀಖ್ ಅತ್ತಬರಿ, ಸಂಪುಟ–2, ಪುಟ–257, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ಹಝ್ರತ್ ಅಬೂಬಕರ್(ರ)ರ ಈ ವಿಂಗಡನೆಯ ಬಗ್ಗೆ ಪ್ರಸ್ತಾಪಿಸುತ್ತಾ ಒಬ್ಬ ಲೇಖಕ ಬರೆಯುತ್ತಾರೆ: ಈ ಯುದ್ಧಕಾರ್ಯಚರಣೆಗಳಿಗಾಗಿ ಝ಼ುಲ್‌ಖುಸ್ಸಾವನ್ನು ಸೇನಾ ಕೇಂದ್ರವನ್ನಾಗಿ ಮಾಡಲಾಯಿತು. ಇಲ್ಲಿಂದ ಸುಸಂಘಟಿತ ಇಸ್ಲಾಮಿಕ ಸೈನ್ಯಗಳು ಧರ್ಮತ್ಯಾಗದ ಚಳುವಳಿಯನ್ನು ತುಳಿದುಹಾಕಲಿಕ್ಕಾಗಿ ವಿವಿಧ ಪ್ರದೇಶಗಳ ಕಡೆಗೆ ಹೋದುವು. ಸೈನಿಕ ತುಕಡಿಗಳ ವಿಂಗಡನೆ ಮತ್ತು ಅವುಗಳಿಗೆ ನಿಶ್ಚಯಿಸಲಾದ ಪ್ರದೇಶಗಳಿಂದ ಸ್ಪಷ್ಟವಾಗುವುದೇನೆಂದರೆ, ಹಝ್ರತ್ ಅಬೂಬಕರ್(ರ)ರಿಗೆ ಭೂಗೋಳಶಾಸ್ತ್ರದ ಸೂಕ್ಷ್ಮವಾದ ಅರಿವು ಇತ್ತು ಎಂದಾಗಿದೆ. ಅವರಿಗೆ ಜನವಸತಿ ಪ್ರದೇಶಗಳ ಮತ್ತು ಅರಬ್ ಭೂಖಂಡದ ರಸ್ತೆಗಳ ಸರಿಯಾದ ಅರಿವು ಇತ್ತು ಎಂದು ಇದರಿಂದ ಗೊತ್ತಾಗುತ್ತದೆ.

ಸೈನ್ಯಗಳೊಂದಿಗೆ ಅವರ ಸಂಪರ್ಕ ಅತ್ಯಂತ ಸೂಕ್ಷ್ಮವಾಗಿತ್ತು. ಸಂಪೂರ್ಣ ಸೈನ್ಯ ಪರಸ್ಪರ ಸಂಪರ್ಕದಲ್ಲಿತ್ತು. ಇದು ಖ಼ಿಲಾಫತಿನ ಮುಖ್ಯವಾದ ಸಾಧನೆಗಳಲ್ಲಿ ಒಂದಾಗಿತ್ತು. ಏಕೆಂದರೆ, ಈ ಸೈನ್ಯಗಳಲ್ಲಿ ನೇತೃತ್ವದ ಪ್ರಾವೀಣ್ಯದೊಂದಿಗೆ ಅತ್ಯುತ್ತಮ ವ್ಯವಸ್ಥೆ ಕೂಡ ಇತ್ತು. ಧರ್ಮತ್ಯಾಗಿಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿದ್ದರು. ಕೆಲವೇ ತಿಂಗಳಲ್ಲಿ ಸಂಪೂರ್ಣ ಮುಸ್ಲಿಮರನ್ನು ಮುಕ್ತಾಯಗೊಳಿಸುವೆವು ಎಂದು ಅವರು ಭಾವಿಸಿಕೊಂಡಿದ್ದರು. ಆದ್ದರಿಂದಲೇ ಬೇಗನೇ ಅವರ ವೈಭವ ಮತ್ತು ಶಕ್ತಿಯನ್ನು ಕೊನೆಗೊಳಿಸಲು ಹಝ್ರತ್ ಅಬೂಬಕರ್(ರ) ಬಯಸಿದ್ದರು. ಅವರ ಪಿತೂರಿಗಳು ವರ್ಧಿಸುವುದಕ್ಕೆ ಮುಂಚಿತವಾಗಿಯೇ

ಕ್ರಮ ಕೈಗೊಂಡರು ಮತ್ತು ಅವರಿಗೆ ತಲೆಯೆತ್ತಲು ಮತ್ತು ಮುಸ್ಲಿಮರಿಗೆ ತೊಂದರೆ ಕೊಡಲು ಅವಕಾಶವೇ ನೀಡಲಿಲ್ಲ.

ಹಝ್ರತ್ ಅಬೂಬಕರ್(ರ)ರ ವತಿಯಿಂದ ನೇತಾರರ ನೇಮಕಕ್ಕೆ ಸಂಬಂಧಿಸಿ ಅನೇಕ ವಿಷಯಗಳನ್ನು ಪ್ರಸ್ತಾಪಿಸುತ್ತಾ ಮತ್ತೊಬ್ಬ ಲೇಖಕರಾದ ಡಾಕ್ಟರ್ ಅಲಿ ಮುಹಮ್ಮದ್ ಸಲಾಬಿ ಬರೆಯುತ್ತಾರೆ: ಮೊದಲನೆಯದಾಗಿ ಈ ಯೋಜನೆಯಲ್ಲಿ ಮಾಡಲಾದ ಏರ್ಪಾಡೇನೆಂದರೆ, ಸೈನ್ಯಗಳ ನಡುವೆ ಪರಸ್ಪರ ಸಂಪರ್ಕ ಮತ್ತು ಸಹಕಾರ ಇರುವಂತೆ ಮಾಡಲಾಗಿತ್ತು. ಈ ಸೈನಿಕ ಸಂಘಗಳ ಸ್ಥಳಗಳು ಮತ್ತು ದಿಕ್ಕುಗಳು ಬೇರೆ ಬೇರೆಯಾಗಿದ್ದರೂ ಎಲ್ಲರೂ ಒಂದೇ ಸರಪಳಿಯಂತೆ ಇದ್ದರು. ಅವರ ಪರಸ್ಪರ ಭೇಟಿ ಮತ್ತು ಬೇರೆ ಬೇರೆಯಾಗುವುದು ಒಂದೇ ಉದ್ದೇಶವನ್ನು ಮುಂದಿರಿಸಿಕೊಂಡಾಗಿತ್ತು. ಖಲೀಫರು ಮದೀನದಲ್ಲಿ ಇದ್ದುಕೊಂಡು ಯುದ್ಧದ ಎಲ್ಲ ಕಾರ್ಯಗಳ ನಿಯಂತ್ರಣ ಖಲೀಫರ ಕೈಯಲ್ಲಾಗಿತ್ತು. ಎರಡನೆಯದಾಗಿ ಖಿಲಾಫತಿನ ಕೇಂದ್ರವಾದ ಮದೀನದ ಸಂರಕ್ಷಣೆಗಾಗಿ ಹಝ್ರತ್ ಅಬೂಬಕರ್(ರ) ಸೈನ್ಯದ ಒಂದು ತುಕಡಿಯನ್ನು ತನ್ನ ಬಳಿ ಇರಿಸಿದರು. ಅದೇ ರೀತಿಯಲ್ಲಿ ಆಡಳಿತ ವಿಷಯಗಳಲ್ಲಿ ಸಲಹೆ ಮತ್ತು ಸಮಾಲೋಚನೆಗಾಗಿ ಶ್ರೇಷ್ಠ ಸಹಾಬಿಯುರ ಒಂದು ಸಂಘವನ್ನು ತನ್ನ ಬಳಿ ಇರಿಸಿಕೊಂಡರು. ಮೂರನೆಯದಾಗಿ ಧರ್ಮತ್ಯಾಗದಿಂದ ಪ್ರಭಾವಿತಗೊಂಡಿದ್ದ ಪ್ರದೇಶಗಳಲ್ಲಿ ಇಸ್ಲಾಮಿಕ ಶಕ್ತಿಯಿದೆ ಎಂದು ಹಝ್ರತ್ ಅಬೂಬಕರ್(ರ)ರಿಗೆ ಗೊತ್ತಾಗಿತ್ತು. ಮುಸ್ಲಿಮರು ಮುಶ್ರಿಕರ ಕೋಪ ಮತ್ತು ದೌರ್ಜನ್ಯಕ್ಕೆ ಗುರಿಯಾಗಬಹುದು ಎಂಬ ಚಿಂತೆ ಹಝ್ರತ್ ಅಬೂಬಕರ್(ರ)ರಿಗೆ ಇತ್ತು. ಆದ್ದರಿಂದ ಸೇನಾಧಿಪತಿಗಳಿಗೆ ಅವರು ಹೀಗೆ ಆದೇಶ ನೀಡಿದರು: ಧರ್ಮತ್ಯಾಗದಿಂದ ಪ್ರಭಾವಿತರಾದ ಪ್ರದೇಶಗಳಲ್ಲಿ ಇರುವ ಮುಸ್ಲಿಮರಲ್ಲಿ ಶಕ್ತರಾದ ಮುಸ್ಲಿಮರನ್ನು ನಿಮ್ಮ ಜೊತೆಗೆ ಸೇರಿಸಿರಿ ಮತ್ತು ಆ ಪ್ರದೇಶಗಳ ಸಂರಕ್ಷಣೆಗಾಗಿ ಕೆಲವು ವ್ಯಕ್ತಿಗಳನ್ನು ಅಲ್ಲೇ ನಿಶ್ಚಯಿಸಿರಿ. ನಾಲ್ಕನೆಯದಾಗಿ ಧರ್ಮತ್ಯಾಗಿಗಳೊಂದಿಗೆ ಯುದ್ಧ ಮಾಡುವಾಗ ಹಝ್ರತ್ ಅಬೂಬಕರ್(ರ) **"ಅಲ್‌ಹರ್‌ಬು ಖುದ್‌ಅತುನ್"** ಎಂಬ ತತ್ವವನ್ನು ಸ್ವೀಕರಿಸಿಕೊಂಡಿದ್ದರು. (ಅರ್ಥ: ಯುದ್ಧ ಒಂದು ತಂತ್ರವಾಗಿದೆ.) ಎಂದರೆ ಸೈನ್ಯದ ಉದ್ದೇಶಗಳು ಇಂತಿಂಥದ್ದಾಗಿವೆ ಎಂದು ಭಾಸವಾಗುವಂತೆ ಮಾಡುವುದು. ಆದರೆ ಉದ್ದೇಶಗಳು ಬೇರೆಯೇ ಆಗಿರುತ್ತವೆ. ಅವರ ಯೋಜನೆಗಳು ನಿಷ್ಫಲಗೊಳ್ಳದಿರಲಿಕ್ಕಾಗಿ ಅವರು ಅತ್ಯಂತ ಮುಂಜಾಗ್ರತೆಯ ರೀತಿಯನ್ನು ಕೈಗೊಂಡಿದ್ದರು. ಈ ರೀತಿಯಾಗಿ ಹಝ್ರತ್ ಅಬೂಬಕರ್(ರ)ರ ನೇತೃತ್ವದಲ್ಲಿ ರಾಜಕೀಯ ನಿಪುಣತೆ, ಅನುಭವ ಜ್ಞಾನ, ಆಳವಾದ ಅರಿವು ಹಾಗೂ ದೈವಿಕ ವಿಜಯ ಮತ್ತು ಸಹಾಯ ಎದ್ದು ಕಾಣಬಹುದಾಗಿದ್ದುವು. (ಸಯ್ಯಿದುನಾ ಹಝ್ರತ್ ಅಬೂಬಕರ್ ಶಖ್ಸಿಯ್ಯತ್ ಔರ್ ಕಾರ್ನಾಮೆ, ಡಾ॥ ಅಲೀ ಮುಹಮ್ಮದ್ ಸಲಾಬಿ ಅನುವಾದ, ಪುಟ–297–298, ಅಲ್‌ಫುರ್ಖಾನ್ ಮುಝಫ್ಫರ್‌ಗಢ್ ಪಾಕಿಸ್ತಾನ್)

ಈ ಸಂದರ್ಭದಲ್ಲಿ ಹಝ್ರತ್ ಅಬೂಬಕರ್(ರ) ಎರಡು ಆದೇಶಗಳನ್ನು ಕೂಡ ಹೊರಡಿಸಿದ್ದರು. ಒಂದು ಅರಬ್ ಗೋತ್ರಗಳ ಹೆಸರಲ್ಲಿ, ಮತ್ತೊಂದು ಸೈನ್ಯದ ಸೇನಾಧಿಪತಿಗಳ ಹೆಸರಲ್ಲಿ.

(ಹಝ್ರತ್ ಅಬೂಬಕರ್ ಕೆ ಸರ್ಕಾರಿ ಖುತೂತ್, ಖುರ್ಷಿದ್ ಅಹ್ಮದ್ ಫಾರೂಖ್, ಪುಟ–22)

ಈ ಪತ್ರದ ಬಗ್ಗೆ ಡಾಕ್ಟರ್ ಅಲಿ ಮುಹಮ್ಮದ್ ಸಲಾಬಿ ಬರೆಯುತ್ತಾರೆ: ಇಸ್ಲಾಮಿನ ಸೈನ್ಯಗಳ ತಯಾರಿಯ ಸುದೃಢವಾದ ಏರ್ಪಾಡಿನ ನಂತರ ಪತ್ರ ವ್ಯವಹಾರಗಳ ಸರಣಿ ಜಾರಿಯಾಗುವುದನ್ನು ನಾವು ನೋಡುತ್ತೇವೆ. ಆ ಪತ್ರಗಳು ಬಹಳ ಮುಖ್ಯವಾದ ಪಾತ್ರವನ್ನು ವಹಿಸಿಕೊಂಡಿದ್ದುವು.

ಸಂಕ್ಷೇಪವಾದ ವಿಷಯವನ್ನು ಒಳಗೊಂಡ ಒಂದು ಮುಖ್ಯವಾದ ಪತ್ರವನ್ನು ಹಝ್ರತ್ ಅಬೂಬಕರ್(ರ) ಬರೆದಿದ್ದರು. ಧರ್ಮತ್ಯಾಗಿಗಳ ವಿರುದ್ಧವಾಗಿ ಯುದ್ಧ ಮಾಡಲಿಕ್ಕಾಗಿ ಸೈನಿಕರನ್ನು ಕಳುಹಿಸುವುದಕ್ಕೆ ಮುಂಚಿತವಾಗಿ ಹಝ್ರತ್ ಅಬೂಬಕರ್(ರ) ಈ ಪತ್ರವನ್ನು ಧರ್ಮತ್ಯಾಗಿಗಳ ಮತ್ತು ಇಸ್ಲಾಂ ಧರ್ಮದಲ್ಲಿ ಸ್ಥಿರಚಿತ್ತರಾಗಿ ನಿಂತಿರುವ ಎಲ್ಲರ ನಡುವೆ ಹೆಚ್ಚಿನ ಸಂಖ್ಯೆಯಲ್ಲಿ ಅತ್ಯುತ್ತಮ ರೀತಿಯಲ್ಲಿ ಸಾಧ್ಯವಾದಷ್ಟು ಹರಡಲು ಪ್ರಯತ್ನಿಸಿದರು. ಗೋತ್ರಗಳ ಬಳಿಗೆ ಜನರನ್ನು ಕಳುಹಿಸಿದರು ಮತ್ತು ಅಲ್ಲಿಗೆ ಹೋಗಿ ಎಲ್ಲ ಸಭೆಗಳಲ್ಲಿ ಈ ಪತ್ರವನ್ನು ಓದಿಹೇಳಲು ಅವರಿಗೆ ಆದೇಶ ನೀಡಿದರು. ಈ ಪತ್ರದಲ್ಲಿ ಇರುವ ಸಂಗತಿಯನ್ನು ಆಲಿಸುವವರು ಅದನ್ನು ಆಲಿಸದವರಿಗೆ ತಲುಪಿಸಲು ಆದೇಶ ನೀಡಿದರು. ಹಝ್ರತ್ ಅಬೂಬಕರ್(ರ) ಈ ಪತ್ರದಲ್ಲಿ ಸಾಮಾನ್ಯ ಮತ್ತು ವಿಶಿಷ್ಟರಾದ ಎಲ್ಲರನ್ನು ಸಂಬೋಧಿಸಿ ಬರೆದಿದ್ದರು. ಅವರು ಇಸ್ಲಾಂ ಧರ್ಮದಲ್ಲಿ ಸ್ಥಿರತೆಯುಳ್ಳವರೋ ಧರ್ಮತ್ಯಾಗ ಮಾಡಿದವರೋ ಆಗಿರಲಿ. (ಸಯ್ಯಿದುನಾ ಹಝ್ರತ್ ಅಬೂಬಕರ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಡಾ॥ ಅಲಿ ಮುಹಮ್ಮದ್ ಸಲಾಬಿ, ಪುಟ–290–291, ಅಲ್‌ಫುರ್ಖಾನ್ ಮುಝಫ್ಫರ್‌ಗಢ್ ಪಾಕಿಸ್ತಾನ್)

ಅರಬ್ ಗೋತ್ರದ ಹೆಸರಲ್ಲಿ ಹಝ್ರತ್ ಅಬೂಬಕರ್(ರ) ಬರೆದ ಪತ್ರವನ್ನು ಅತ್ಯಂತ ವಿಶದವಾಗಿ ತಬರಿ ನಮೂದಿಸಿರುವರು. ಹಝ್ರತ್ ಮಸೀಹ್ ಮೌಊದ್(ಅ) ತನ್ನ ಗ್ರಂಥವಾದ ಸಿರ್ರುಲ್‌ಖಿಲಾಫದಲ್ಲಿ ಅರಬ್ ಗೋತ್ರಗಳ ಹೆಸರಲ್ಲಿ ಬರೆದ ಪತ್ರದ ಬಗ್ಗೆ ಪ್ರಸ್ತಾಪಿಸುತ್ತಾ ಹೇಳುತ್ತಾರೆ: ನಾವಿಲ್ಲಿ ಆ ಪತ್ರವನ್ನು ನಮೂದಿಸುವುದು ಅನುಯೋಜ್ಯವೆಂದು ಭಾವಿಸುತ್ತೇವೆ. ಈ ಪತ್ರದ ಬಗ್ಗೆ ತಿಳಿಯುವವರು ಅಲ್ಲಾಹನ ಮಹಿಮೆ ಪ್ರಕಟಗೊಳ್ಳುವ ಸ್ಥಳಗಳ ಮತ್ತು ಹಝ್ರತ್ ಪೈಗಂಬರ್(ಸ)ರ ಎಲ್ಲ ಸುನ್ನತ್‌ಗಳ ಸಂರಕ್ಷಣೆಗಾಗಿ ಹಝ್ರತ್ ಅಬೂಬಕರ್(ರ) ತೋರಿಸಿದ ಧೀರತೆಯನ್ನು ನೋಡಿಕೊಂಡು ತಮ್ಮ ವಿಶ್ವಾಸ ಮತ್ತು ಅರಿವಿನಲ್ಲಿ ಅಭಿವೃದ್ಧಿ ಹೊಂದುವವರಾಗಲಿ.

**ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ**. ಈ ಪತ್ರವು ಖಲೀಫತುರ್ರಸೂಲ್ ಆದ ಅಬೂಬಕರ್ ಕಡೆಯಿಂದ ಎಲ್ಲ ವಿಶಿಷ್ಟ ಮತ್ತು ಸಾಮಾನ್ಯ ವ್ಯಕ್ತಿಗಳಿಗೆ ಆಗಿದೆ. ಇಸ್ಲಾಂ ಧರ್ಮದಲ್ಲಿ ಸ್ಥಿರವಾಗಿ ಇರುವವರೋ ಅಥವಾ ಅದರಿಂದ ಮುಖ ತಿರುಗಿಸುವವರೋ ಯಾರಿಗೆ ಆಗಲಿ ಈ ಪತ್ರವು ತಲುಪುದೋ ಅವರೊಡನೆ ನಾನು ಹೇಳುತ್ತೇನೆ. ಸನ್ಮಾರ್ಗ ಲಭಿಸಿದ ನಂತರ ದುರ್ಮಾರ್ಗ ಮತ್ತು ಕುರುಡುತನದ ಕಡೆಗೆ ಮರಳಿ ಹೋಗದೇ ಸನ್ಮಾರ್ಗವನ್ನು ಅನುಸರಿಸುವ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಸಮಾಧಾನವಿರಲಿ. ನಾನು ನಿಮ್ಮ ಮುಂದೆ ಅಲ್ಲಾಹನಿಗೆ ಸರ್ವಸ್ತುತಿಯನ್ನು ಅರ್ಪಿಸುತ್ತೇನೆ. ಅವನಲ್ಲದೇ ಆರಾಧ್ಯನಿಲ್ಲ, ಅವನೂ ಏಕನೂ ಸಹಭಾಗಿ ಇಲ್ಲದವನೂ ಆಗಿದ್ದಾನೆ ಎಂದೂ ಹಝ್ರತ್ ಮುಹಮ್ಮದ್(ಸ) ಅವನ ದಾಸ ಮತ್ತು ದೂತರಾಗಿದ್ದಾರೆ ಎಂದೂ ನಾನು ಸಾಕ್ಷ್ಯವಹಿಸುತ್ತೇನೆ. ಅವರು ತಂದದ್ದನ್ನು ನಾವು ಒಪ್ಪಿ ನಂಬುತ್ತೇವೆ. ಅದನ್ನು ನಿರಾಕರಿಸಿದವರನ್ನು ನಾವು ಸತ್ಯನಿಷೇಧಿಗಳೆಂದು ಹೇಳುತ್ತೇವೆ ಮತ್ತು ಅವರ ವಿರುದ್ಧ ಜಿಹಾದ್ ಮಾಡುತ್ತೇವೆ. ಅಲ್ಲಾಹನು ಮುಹಮ್ಮದ್ ರಸೂಲುಲ್ಲಾಹ್(ಸ)ರನ್ನು ತನ್ನ ವತಿಯಿಂದ ಸತ್ಯವನ್ನು ನೀಡಿಕೊಂಡು ತನ್ನ ಸೃಷ್ಟಿಗಳ ಕಡೆಗೆ ಸುವಾರ್ತೆಗಾರನೂ ಮುನ್ನೆಚ್ಚರಿಕೆಗಾರನೂ, ಅಲ್ಲಾಹನ ಕಡೆಗೆ ಅವನ ಆದೇಶ ಪ್ರಕಾರ ಕರೆಯುವವನೂ ಹಾಗೂ ಬೆಳಗಿಸುವ ಸೂರ್ಯನ ಹಾಗೆಯೂ ಕಳುಹಿಸಿರುವನು. ಜೀವಂತವಾಗಿ ಇರುವವರಿಗೆ ಮುನ್ನೆಚ್ಚರಿಕೆ ನೀಡಲು ಮತ್ತು ಸತ್ಯನಿಷೇಧಿಗಳ ಕುರಿತು ಹೇಳಿದ ಮಾತುಗಳು ಈಡೇರಲು ಬೇಕಾಗಿ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರನ್ನು ಕಳುಹಿಸಿದನು. ಹಝ್ರತ್ ಪೈಗಂಬರ್(ಸ)ರನ್ನು ನಂಬಿದವರನ್ನು ಅಲ್ಲಾಹನು ಸತ್ಯದೊಂದಿಗೆ ಮಾರ್ಗದರ್ಶನ ಮಾಡಿದನು. ಯಾರು ಹಝ್ರತ್ ಪೈಗಂಬರ್(ಸ)ರಿಂದ ಬೆನ್ನು ತಿರುಗಿಸಿದರೋ ಅವರೊಂದಿಗೆ ಅವರು ಇಷ್ಟದಿಂದ ಅಥವಾ ಅನಿಷ್ಟದಿಂದ ಇಸ್ಲಾಮಿಗೆ ಬರುವ ತನಕ ಹಝ್ರತ್ ಪೈಗಂಬರ್(ಸ) ಯುದ್ಧ ಮಾಡಿದರು. ಅನಂತರ ಹಝ್ರತ್ ಪೈಗಂಬರ್(ಸ) ನಿಧನರಾದರು. ಹಝ್ರತ್ ಪೈಗಂಬರ್(ಸ) ಅಲ್ಲಾಹನ ಆದೇಶಗಳನ್ನು ಕಾರ್ಯಗತಗೊಳಿಸಿದರು ಮತ್ತು ಸಮುದಾಯಕ್ಕೆ ಒಳಿತನ್ನು ಮಾಡಿದರು. ಅವರಿಗೆ ಒಪ್ಪಿಸಲಾದ ಜವಾಬ್ದಾರಿಯನ್ನು ಅವರು ಈಡೇರಿಸಿದರು. ಅವರ ಮೇಲೆ ಮತ್ತು ಮುಸ್ಲಿಮರ ಮೇಲೆ ಅಲ್ಲಾಹನು ಈ ಗ್ರಂಥದಲ್ಲಿ ಅವತೀರ್ಣಗೊಳಿಸಿದ್ದನ್ನು ಸ್ಪಷ್ಟವಾಗಿ ವಿವರಿಸಿದನು. ಅವನು ಹೀಗೆ ಹೇಳುತ್ತಾನೆ: **ಇನ್ನಕ ಮಯ್ಯಿತುನ್ ವ ಇನ್ನಹುಂ ಮಯ್ಯಿತೂನ್**. ಎಂದರೆ, ಖಂಡಿತವಾಗಿಯೂ ನೀವು ಕೂಡ ಮೃತಪಡುವಿರಿ ಮತ್ತು ನಿಶ್ಚಯವಾಗಿಯೂ ಅವರು ಕೂಡ ಮೃತಪಡುವರು. ಅಲ್ಲಾಹನು ಹೇಳುತ್ತಾನೆ: **ವಮಾ ಜಅಲ್‌ನಾ ಲಿಬಶರಿನ್ ಮಿನ್‌ಖಬ್‌ಲಿಕಲ್ ಖುಲ್‌ದ್**. ನಾವು ಯಾವುದೇ ಮನುಷ್ಯನಿಗೆ ನಿನಗಿಂತ ಮುಂಚೆ ಅನಂತ ಕಾಲದ ಜೀವಿತವನ್ನು ನೀಡಿಲ್ಲ. **ಅಫಿಮ್ಮಿತ್ತ ವಹುಮುಲ್ ಖಾಲಿದೂನ್**. ನೀನು ಮೃತಪಡುವಿಯಾದರೇ ಅವರು ಸದಾ ಜೀವಿಸುವರೇ? ಅನಂತರ ಅಲ್ಲಾಹನು ಸತ್ಯವಿಶ್ವಾಸಿಗಳೊಡನೆ ಹೇಳುತ್ತಾನೆ: **ವಮಾ ಮುಹಮ್ಮದುನ್ ಇಲ್ಲಾ ರಸೂಲ್. ಖದ್ ಖಲತ್ ಮಿನ್‌ಖಬ್‌ಲಿಹಿರ್ರುಸುಲ್. ಅಫಇಮ್ಮಾತ ಔ ಖುತಿಲನ್‌ಖಲಬ್‌ತುಮ್ ಅಲಾ ಅಅ್‌ಖಾಬಿಕುಂ. ವಮನ್ ಯನ್‌ಖಲಿಬು ಅಲಾ ಅಖಿಬೈಹಿ ಫಲನ್ ಯಝುರ್ರಲ್ಲಾಹ ಶೈಅನ್ ವಸಯಜ್‌ಝಿಯಲ್ಲಾಹು ಶ್ಶಾಕಿರೀನ್**. ಎಂದರೆ, ಮುಹಮ್ಮದ್(ಸ) ಕೇವಲ ಓರ್ವ ಸಂದೇಶವಾಹಕರಾಗಿದ್ದರು. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರೂ ಗತಿಸಿದ್ದಾರೆ. ಒಂದು ವೇಳೆ ಅವರು ಮೃತಪಟ್ಟರೆ ಅಥವಾ ಹತ್ಯೆಗೀಡಾದರೆ ನೀವು ಹಿಂತಿರುಗಿ ಹೋಗುವಿರಾ? ಹಿಂತಿರುಗಿ ಹೋಗುವವನು ಅಲ್ಲಾಹನಿಗೆ ಏನೂ ಹಾನಿಯುಂಟುಮಾಡಲಾರ. ಕೃತಜ್ಞತೆ ಸೂಚಿಸುವವರಿಗೆ ಅಲ್ಲಾಹನು ಖಂಡಿತವಾಗಿಯೂ ಪ್ರತಿಫಲ ನೀಡುತ್ತಾನೆ. ಮುಂದುವರೆಸುತ್ತಾ ಬರೆಯುತ್ತಾರೆ: ಯಾರು ಮುಹಮ್ಮದನ್ನು ಪೂಜಿಸುತ್ತಿದ್ದರೋ ಅವರು ಅರಿಯಿರಿ. ಮುಹಮ್ಮದ್(ಸ) ನಿಧನರಾದರು.

ಯಾರು ಏಕನೂ ಸಹಭಾಗಿಯಿಲ್ಲದವನೂ ಆದ ಅಲ್ಲಾಹನನ್ನು ಆರಾಧಿಸುತ್ತಿದ್ದರೋ ಅವರು ಅರಿಯಲಿ. ಅಲ್ಲಾಹನು ಅವನನ್ನು ಸದಾ ನೋಡುತ್ತಿದ್ದಾನೆ. ಅಲ್ಲಾಹನು ಜೀವಂತನೂ ಎಂದೆಂದೂ ನೆಲೆನಿಲ್ಲುವವನೂ ಆಗಿರುವನು. ಅವನು ಸಾಯಲಾರನು. ಅವನಿಗೆ ತೂಕಾಡಿಕೆಯೋ ನಿದ್ದೆಯೋ ಬರುವುದಿಲ್ಲ. ಅವನು ತನ್ನ ಕೆಲಸದ ಮೇಲ್ನೋಟ ಸ್ವತಃ ವಹಿಸುತ್ತಾನೆ. ಅವನು ಶತ್ರುಗಳಿಂದ ಪ್ರತೀಕಾರವನ್ನು ಪಡೆಯುವನು. ಅವರಿಗೆ ಶಿಕ್ಷೆಯನ್ನು ಕೊಡುವನು. ನಾನು ನಿಮ್ಮೊಡನೆ ದೇವಭಕ್ತಿ ಕೈಗೊಳ್ಳಲು, ನಿಮಗೆ ಅಲ್ಲಾಹನು ನಿಶ್ಚಯಿಸಿದ ಸೌಭಾಗ್ಯವನ್ನು ಪಡೆಯಲು ಮತ್ತು ನಿಮ್ಮ ಪೈಗಂಬರ್(ಸ) ನಿಮ್ಮ ಬಳಿಗೆ ತಂದ ಆ ಬೋಧನೆಗಳನ್ನು ಅನುಸರಿಸಲು ತಾಕೀತು ಮಾಡುತ್ತೇನೆ ಹಾಗೂ ನೀವು ಹಝ್ರತ್ ಪೈಗಂಬರ್(ಸ)ರ ಮಾರ್ಗದರ್ಶನ ಪ್ರಕಾರ ಮಾರ್ಗದರ್ಶನ ಗಳಿಸಿರಿ ಮತ್ತು ಅಲ್ಲಾಹನ ಧರ್ಮವನ್ನು ಸುದೃಢವಾಗಿ ಹಿಡಿಯಿರಿ. ಏಕೆಂದರೆ ಅಲ್ಲಾಹನು ಸನ್ಮಾರ್ಗ ಕೊಡದ ಪ್ರತಿಯೊಬ್ಬ ವ್ಯಕ್ತಿ ದಾರಿತಪ್ಪಿದವನಾಗಿದ್ದಾನೆ. ಅಲ್ಲಾಹನು ಸಂರಕ್ಷಿಸದ ಪ್ರತಿಯೊಬ್ಬ ವ್ಯಕ್ತಿ ವಿಪತ್ತುಗಳಿಗೆ ಸಿಲುಕುವನು. ಅವನು ನೆರವು ನೀಡದ ಪ್ರತಿಯೊಬ್ಬ ವ್ಯಕ್ತಿ ನಿಸ್ಸಹಾಯಕನಾಗಿರುವನು. ಆದ್ದರಿಂದ ಯಾರಿಗೆ ಅಲ್ಲಾಹನು ಸನ್ಮಾರ್ಗ ನೀಡುವನೋ ಅವನೇ ಸನ್ಮಾರ್ಗಿ. ಯಾರನ್ನು ಅಲ್ಲಾಹನು ದಾರಿ ತಪ್ಪಿದವನೆಂದು ತೀರ್ಮಾನಿಸುತ್ತಾನೋ ಅವನೇ ದುರ್ಮಾರ್ಗಿ. ಅಲ್ಲಾಹನು ಹೇಳುತ್ತಾನೆ: **ಮನ್‌ಯಹ್‌ದಿಯಲ್ಲಾಹು ಫಹುವಲ್ ಮುಹ್‌ತದ್. ವಮನ್‌ಯುಝ್ಲಿಲ್ ಫಲನ್ ತಜಿದ ಲಹೂ ವಲಿಯ್ಯನ್ ಮುರ್ಶದ.** ಎಂದರೆ, ಯಾರಿಗೆ ಅಲ್ಲಾಹನು ಸನ್ಮಾರ್ಗವನ್ನು ನೀಡುತ್ತಾನೋ ಅವನೇ ಸನ್ಮಾರ್ಗವನ್ನು ಪಡೆಯುವವನಾಗಿರುತ್ತಾನೆ. ಯಾರನ್ನು ಅವರು ದಾರಿ ತಪ್ಪಿದವನೆಂದು ತೀರ್ಪು ಮಾಡುತ್ತಾನೋ ಅವನಿಗಾಗಿ ಸನ್ಮಾರ್ಗವನ್ನು ಕೊಡುವ ಯಾವನೇ ಮಿತ್ರನು ಸಿಗಲಾರದು. ಲೋಕದಲ್ಲಿ ಅವನಿಗೆ ಏನಾಯಿತು? ಅವನು ಇಸ್ಲಾಂ ಧರ್ಮವನ್ನು ನಂಬದ ತನಕ ಅವನ ಯಾವುದೇ ಸತ್ಕರ್ಮ ಸ್ವೀಕರಿಸಲ್ಪಡದು. ಅವನಿಂದ ಪರಲೋಕದಲ್ಲಿ ಅವನ ವತಿಯಿಂದ ಯಾವುದೇ ನಷ್ಟಭರ್ತಿ ಮತ್ತು ಪ್ರತಿಫಲ ಸ್ವೀಕರಿಸಲ್ಪಡದು. ನಿಮ್ಮಲ್ಲಿ ಕೆಲವರು ಇಸ್ಲಾಂ ಧರ್ಮವನ್ನು ನಂಬಿದ ಮತ್ತು ಅದರ ಪ್ರಕಾರ ನಡೆದ ನಂತರ ಅಲ್ಲಾಹನಗೆ ಮೋಸಮಾಡುತ್ತಾ ಮತ್ತು ಅವನ ವಿಷಯದಲ್ಲಿ ಮೂಢತನ ತೋರಿಸುತ್ತಾ ಹಾಗೂ ಶೈತಾನನ ಮಾತನ್ನು ಒಪ್ಪುತ್ತಾ ತಮ್ಮ ಧರ್ಮದಿಂದ ಹಿಂತಿರುಗಿ ಹೋಗಿದ್ದೀರಿ ಎಂದು ನನಗೆ ಮಾಹಿತಿ ಲಭಿಸಿದೆ. ಅಲ್ಲಾಹನು ಹೇಳುತ್ತಾನೆ: **ವಇಧ್ ಖುಲ್‌ನಾ ಲಿಲ್‌ಮಲಾಯಿಕತುಹೂ ಉಸ್‌ಜುದೂ ಲಿಆದಮ ಫಸಜದೂ ಇಲ್ಲಾ ಇಬ್‌ಲೀಸ. ವಕಾನ ಮಿನಲ್ ಜಿನ್ನಿ ಫಫಸಿಕ ಅನ್ ಅಮ್‌ರಿ ರಬ್ಬಿಹೀ ಅಫತತ್ತಖಿದೂನಹೂ ಧುರ್ರಿಯತನ್ ಔಲಿಯಾಉ ಮಿನ್‌ದೂನಿ ವಹುಂ ಲಕುಂ ಅದುವ್ವುನ್ ಬೀಸ ಲಿಲ್‌ಝ್ವಾಲಿಮೀನ ಬದಲಾ.** 'ಆದಮರ ಆಜ್ಞಾನುಸರಣೆ ಮಾಡಿರಿ' ಎಂದು ನಾವು ದೇವದೂತರೊಡನೆ ಹೇಳಿದ ಸಂದರ್ಭ – ಆಗ ಅವರು (ಎಲ್ಲರೂ) ಆಜ್ಞಾನುಸರಣೆ ಮಾಡಿದರು; ಆದರೆ ಇಬ್‌ಲೀಸ್ ವಿಧೇಯನಾಗಲಿಲ್ಲ. ಅವನು ಜಿನ್ನ್ ಪೈಕಿಯವನಾಗಿದ್ದನು. ಅವನು ತನ್ನ ಪ್ರಭುವಿನ ಆಜ್ಞೆಯನ್ನು ಧಿಕ್ಕರಿಸಿದನು. ಹಾಗಿರುವಾಗ, ನೀವು ನನ್ನನ್ನು ಬಿಟ್ಟು ನಿಮ್ಮ ಶತ್ರುಗಳಾಗಿರುವ ಅವನನ್ನೂ ಅವನ ಸಂತತಿಗಳನ್ನೂ ಮಿತ್ರರನ್ನಾಗಿ ಮಾಡಿಕೊಳ್ಳುವಿರಾ? ದುರ್ಜನರಿಗೆ ಸಿಗುವ ಪ್ರತಿಫಲ ಅತಿ ಕೆಟ್ಟದ್ದಾಗಿದೆ.

ಮತ್ತೂ ಅಲ್ಲಾಹನು ಹೇಳುತ್ತಾನೆ: **ಇನ್ನಶ್ಶೈತಾನ ಲಕುಂ ಅದುವ್ವುನ್ ಫತ್ತಖಿದೂ ಅದುವ್ವುನ್ ಇನ್ನಮಾ ಯದ್‌ಊ ಹಿಜ್‌ಬಹೂ. ಲಯಕೂನು ಮಿನ್ ಅಸ್‌ಹಾಬಿಸ್ಸಈರ್**. ಎಂದರೆ, ನಿಸ್ಸಂದೇಹವಾಗಿಯೂ ಶೈತಾನನು ನಿಮ್ಮ ವೈರಿಯಾಗಿದ್ದಾನೆ. ಆದ್ದರಿಂದ ನೀವು ಅವನನ್ನು ವೈರಿಯಾಗಿಯೇ ಗಣಿಸಿರಿ. ಅವನು ತನ್ನ ಸಂಗಡಿಗರನ್ನು ಕರೆಯುವುದು ಅವರು ಜ್ವಲಿಸುವ ಅಗ್ನಿಯ ನಿವಾಸಿಗಳಾಗಲಿಕ್ಕೆ ಮಾತ್ರವಾಗಿದೆ. ಹಝ್ರತ್ ಅಬೂಬಕರ್(ರ) ಹೇಳುತ್ತಾರೆ: ಮುಹಾಜಿರರು, ಅನ್ಸಾರರು ಮತ್ತು ಅತ್ಯುತ್ತಮ ಸತ್ಕರ್ಮಗಳೊಂದಿಗೆ ಅನುಸರಿಸುವ ವಿಧೇಯರ ಸೈನ್ಯದ ಮೇಲೆ ಒಬ್ಬ ವ್ಯಕ್ತಿಯನ್ನು ನೇಮಿಸಿ ನಾನು ನಿಮ್ಮ ಕಡೆಗೆ ಕಳುಹಿಸಿದ್ದೇನೆ. ಅಲ್ಲಾಹನ ಸಂದೇಶದ ಕಡೆಗೆ ಕರೆಯದೇ ಯಾರೊಂದಿಗೂ ಯುದ್ಧ ಮಾಡಬಾರದೆಂದೂ ಯಾರನ್ನೂ ಕೊಲ್ಲಬಾರದೆಂದೂ ನಾನು ಅವರಿಗೆ ಆದೇಶ ನೀಡಿದ್ದೇನೆ.

ಅನಂತರ ಯಾರು ಈ ಸಂದೇಶವನ್ನು ಅಂಗೀಕರಿಸುವನೋ ಮತ್ತು ಒಪ್ಪುವನೋ ಹಾಗೂ ಪಿತೂರಿಯಿಂದ ಹಿಂದಕ್ಕೆ ಸರಿಯುವನೋ ಮತ್ತು ಸತ್ಕರ್ಮ ಮಾಡುವನೋ ಅವನನ್ನು ಸ್ವೀಕಾರ ಮಾಡಲು ಹಾಗೂ ಅವನಿಗೆ ಸಹಾಯ ಮಾಡಲು ನಾನು ಅವರಿಗೆ ಆದೇಶ ನೀಡಿದ್ದೇನೆ. ಯಾರು ನಿರಾಕರಿಸುತ್ತಾರೋ ಅವರೊಂದಿಗೆ ಈ ವಿಷಯದಲ್ಲಿ ಯುದ್ಧ ಮಾಡಲು ಮತ್ತು ಸಿಕ್ಕಿದವರಲ್ಲಿ ಯಾರನ್ನೂ ಬಾಕಿಯುಳಿಸದಿರಲು ಅಥವಾ ಅವರನ್ನು ಬೆಂಕಿಯಿಂದ ಸುಟ್ಟು ಹಾಕಲು ಮತ್ತು ಪ್ರತಿಯೊಂದು ರೀತಿಯಲ್ಲಿ ಅವರನ್ನು ವಧಿಸಲು ಹಾಗೂ ಮಹಿಳೆಯರನ್ನು ಮತ್ತು ಮಕ್ಕಳನ್ನು ಬಂಧಿಸಲು ಹಾಗೂ ಯಾರೊಡನೆಯೂ ಇಸ್ಲಾಮಲ್ಲದೇ ಬೇರೇನನ್ನೂ ಸ್ವೀಕರಿಸದಿರಲು ನಾನು ಅವರಿಗೆ ಆದೇಶ ನೀಡಿದ್ದೇನೆ. ಅನಂತರ ಯಾರು ಅವರ ಅನುಸರಣೆ ಮಾಡುತ್ತಾರೋ ಅದು ಅವರಿಗೆ ಒಳ್ಳೆಯದು. ಯಾರು ಅದನ್ನು ಬಿಟ್ಟುಬಿಡುತ್ತಾನೋ ಅವನು ಅಲ್ಲಾಹನನ್ನು ನಿಸ್ಸಹಾಯಕನನ್ನಾಗಿ ಮಾಡಲು ಸಾಧ್ಯವಲ್ಲ. ನನ್ನ ಈ ಪತ್ರವನ್ನು ನಿಮ್ಮ ಎಲ್ಲ ಸಭೆಗಳಲ್ಲಿ ಓದಿ ಹೇಳಲು ನಾನು ನನ್ನ ದೂತರನ್ನು ಆಜ್ಞಾಪಿಸಿದ್ದೇನೆ. ಅಧ್ಾನಿನ ಇಸ್ಲಾಮಿನ ಘೋಷಣೆಯಾಗಿದೆ. ಆದ್ದರಿಂದ ಮುಸ್ಲಿಮನು ಅಧ್ಾನ್ ಕೊಡುವಾಗ ಅವರು ಸಹ ಅಧ್ಾನ್ ನೀಡಲಿ ಹಾಗೂ ಅವರ ಮೇಲೆ ದಾಳಿ ಮಾಡುವುದನ್ನು ನಿಲ್ಲಿಸಬೇಕು. ಅವರು ಅಧ್ಾನ್ ನೀಡದಿದ್ದರೆ ಅವರ ಮೇಲೆ ಬೇಗನೇ ದಾಳಿ ನಡೆಸಿರಿ. ಅವರು ಅಧ್ಾನ್ ನೀಡಿದರೆ ಅವರ ಮೇಲೆ ಕಡ್ಡಾಯವಾದುದನ್ನು ಕೇಳಿ ಪಡೆಯಿರಿ. ಅವರು ನಿರಾಕರಿಸಿದರೆ, ಅವರ ಮೇಲೆ ಬೇಗನೇ ದಾಳಿ ನಡೆಸಿರಿ. ಅವರು ಒಪ್ಪಿದರೆ, ಅವರಿಂದ ಸ್ವೀಕಾರ ಮಾಡಿರಿ. (ಸಿರ್‍ರುಲ್ ಖಿಲಾಫ ಉರ್ದು ಅನುವಾದ, ನಝಾರತ್ ಇಶಅತ್, ಪುಟ–190–194 ಅಡಿಟಿಪ್ಪಣಿ)

ಹೇಗಿದ್ದರೂ ಈ ಯುದ್ಧ ಏಕೆ ನಡೆಯಿತ್ತು ಮತ್ತು ಅವರೊಂದಿಗೆ ಏಕೆ ಹೀಗೆ ವರ್ತಿಸಲಾಯಿತು ಎಂಬುದರ ವಿವರಣೆಯಿದೆ. ಏಕೆಂದರೆ, ಈ ಶತ್ರುಗಳು ಮುಸ್ಲಿಮರ ವಿರುದ್ಧ ಒತ್ತಾಯಪೂರ್ವಕವಾಗಿ ಯುದ್ಧ ಮಾಡುವವರಾಗಿದ್ದರು. ಯುದ್ಧ ಮಾತ್ರವಲ್ಲ, ದೌರ್ಜನ್ಯವನ್ನು ಕೂಡ ಮಾಡುತ್ತಿದ್ದರು. ನಿಸ್ಸಹಾಯಕರಾಗಿ ಕೆಲವು ಪ್ರದೇಶಗಳಲ್ಲಿ ಇದ್ದ ಮುಸ್ಲಿಮರ ಮೇಲೆ ದೌರ್ಜನ್ಯ ಮಾಡುತ್ತಿದ್ದರು.

ಹಝ್ರತ್ ಅಬೂಬಕರ್(ರ) ಎರಡನೇ ಪತ್ರವನ್ನು ಹನ್ನೊಂದು ಸೇನಾಧಿಪತಿಗಳ ಹೆಸರುಗಳಲ್ಲಿ ಬರೆದಿದ್ದರು ಮತ್ತು ಪ್ರತಿಯೊಬ್ಬ ಸೇನಾಧಿಪತಿಗೆ ತಾಕೀತಾಗಿ ಹೀಗೆ ಆದೇಶ ನೀಡಿದರು:

**ಬಿಸ್ಮಿಲ್ಲಾಹಿರ್‍ರಹ್ಮಾನಿರ್‍ರಹೀಂ**. ಅವರು ಪ್ರತಿಯೊಂದು ವಿಷಯದಲ್ಲಿ ಬಾಹ್ಯ ಮತ್ತು ಅಂತರಂಗದಲ್ಲಿ ಅಲ್ಲಾಹನ ಭಯಭಕ್ತಿ ಇರಿಸಬೇಕು. ಅಲ್ಲಾಹನ ವಿಷಯದಲ್ಲಿ ಕಠಿಣ ಪ್ರಯತ್ನ ಮಾಡಲು ಅವರಿಗೆ ಸಾಧ್ಯವಾದಷ್ಟು ಮಾಡಲಿ. ಯಾರು ಅಲ್ಲಾಹನಿಂದ ಬೆನ್ನು ತಿರುಗಿಸಿದರೋ ಮತ್ತು ಇಸ್ಲಾಂ ಧರ್ಮದಿಂದ ಹಿಮ್ಮೆಟ್ಟಿ ಪೈಶಾಚಿಕ ಆಸೆಗಳನ್ನು ಕೈಗೊಂಡಿರುವರೋ ಹಾಗೂ ಯಾರ ವಿರುದ್ಧ ಜಿಹಾದ್ ಮಾಡಲು ಆದೇಶ ನೀಡಲಾಗಿದೆಯೋ ಮೊತ್ತಮೊದಲು ಅವರಿಗೆ ಇಸ್ಲಾಮಿನ ಸಂದೇಶವನ್ನು ಚೆನ್ನಾಗಿ ತಲುಪಿಸಿರಿ. ಅವರು ಅದನ್ನು ಅಂಗೀಕರಿಸಿದರೆ, ಅವರೊಂದಿಗೆ ಯುದ್ಧ ಮಾಡುವುದರಿಂದ ತಡೆದು ನಿಲ್ಲಿರಿ. ಅವರು ಅದನ್ನು ಸ್ವೀಕಾರ ಮಾಡದಿದ್ದರೆ, ಅವರ ಮೇಲೆ ತಕ್ಷಣವೇ ದಾಳಿ ಮಾಡಿರಿ. ಅವರು ನಿಮ್ಮ ಮುಂದೆ ಬಾಗುವ ವರೆಗೂ ಅದನ್ನು ಮುಂದುವರೆಸಿರಿ. ಅನಂತರ ಅವರೊಡನೆ ಅವರ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ಹೇಳಿಕೊಡಿರಿ. ಅವರಿಗೆ ಕಡ್ಡಾಯವಾದುದನ್ನು ಅವರಿಂದ ವಸೂಲು ಮಾಡಿರಿ. ಅವರಿಗೆ ಸಲ್ಲಬೇಕಾದ ಹಕ್ಕುಗಳನ್ನು ಕೊಡಿರಿ. ಮುಸ್ಲಿಮರ ವಿರುದ್ಧ ದಾಳಿ ಮಾಡಲು ತಯಾರಾಗಿರುವವರಿಗೆ ಸಮಯಾವಕಾಶವನ್ನು ನೀಡಬೇಡಿರಿ. ಯಾರು ನಿರಾಕರಿಸುತ್ತಾರೋ ಅವರೊಡನೆ ಯುದ್ಧ ಮಾಡಿರಿ.

ಯಾರು ಇಸ್ಲಾಂ ಸ್ವೀಕಾರ ಮಾಡುತ್ತಾರೋ ಅವರನ್ನು ನೀವು ಸ್ವೀಕರಿಸಿರಿ. ಅವರಿಗೆ ಇಸ್ಲಾಮಿನ ಅಧ್ಯಾಪನೆಗಳನ್ನು ಕಲಿಸಿಕೊಡಿರಿ. ಯಾರು ನಿರಾಕರಿಸುತ್ತಾರೋ ಎಂದರೆ, ಮುಸ್ಲಿಮರಾದ ನಂತರ ಧರ್ಮತ್ಯಾಗಿಗಳಾದರು ಮಾತ್ರವಲ್ಲ, ಮುಸ್ಲಿಮರ ವಿರುದ್ಧ ಯುದ್ಧಗಳನ್ನು ಮಾಡುತ್ತಾರೋ ಅವರಿಗೆ ಇಸ್ಲಾಮಿನ ಸತ್ಯತೆಯನ್ನು ತಿಳಿಸಿಕೊಡಿರಿ. ನೀವು ಮುಸ್ಲಿಮರಾಗಿದ್ದೇವೆ ಎಂದು ವಾದಿಸಿದ ನಂತರ ಆಡಳಿತದ ವಿರುದ್ಧ ಯುದ್ಧಮಾಡಬಾರದು ಎಂದು ಹೇಳಿಕೊಡಿರಿ. ಅದರ ನಂತರವೂ ಅವರು ನಿರಾಕರಿಸಿದರೆ, ಅವರೊಡನೆ ಯುದ್ಧ ಮಾಡಿರಿ. ಅಲ್ಲಾಹನು ಮುಸ್ಲಿಮರಿಗೆ ಈ ಶತ್ರುಗಳ ಮೇಲೆ ವಿಜಯ ನೀಡಿದರೆ, ಅವರನ್ನು ಅತ್ಯಂತ ಹೀನಾಯವಾಗಿ ಆಯುಧಗಳು ಮತ್ತು ಬೆಂಕಿಯಿಂದ ವಧಿಸಿರಿ. ಅನಂತರ ಲಭಿಸುವ ಯುದ್ಧ ಸಂಪತ್ತಿನಿಂದ ಐದನೇ ಒಂದು ಪಾಲು ಹೊರತುಪಡಿಸಿ ವಿತರಣೆ ಮಾಡಿರಿ. ಸೇನಾಧಿಪತಿಗಳು ತಮ್ಮ ಜೊತೆಗಿರುವವರನ್ನು ಅವಸರ ಮತ್ತು ಪಿತೂರಿಯಿಂದ ತಡೆಯಲಿ. ಅವರಲ್ಲಿ ಅನ್ಯನಾದ ಯಾವನೂ ಪ್ರವೇಶಿಸದಿರಲಿ. ಅವನಲ್ಲಿ ಇರುವ ಸಾಮರ್ಥ್ಯವೇನೆಂದು ಅರಿಯದೇ ಯಾವನಿಗೂ ಸೈನ್ಯದಲ್ಲಿ ಪ್ರವೇಶ ನೀಡಬಾರದು. ನೀವು ಪ್ರವೇಶ ಕೊಡುವ ವ್ಯಕ್ತಿ ಗೂಢಚರನೂ ಆಗಿರಲೂ ಬಹುದು. ಒಳ್ಳೆಯದಾಗಿ ಪರಿಶೋಧನೆ ನಡೆಸಿದ ನಂತರ ಅವರನ್ನು ಪ್ರವೇಶಗೊಳಿಸಬೇಕು. ಯಾತ್ರೆ ಮತ್ತು ತಂಗುವಿಕೆಯಲ್ಲಿ ಮುಸ್ಲಿಮರೊಡನೆ ಸೌಮ್ಯತೆಯಿಂದ ವರ್ತಿಸಿರಿ. ಅವರ ಕಾರ್ಯಗಳನ್ನು ಸದಾ ಅರಿಯುತ್ತಾ ಇರಬೇಕು. ಸೈನ್ಯದ ಒಂದು ಭಾಗದೊಡನೆ ಮತ್ತೊಂದು ಭಾಗಕ್ಕಿಂತ ವೇಗವಾಗಿ ಹೋಗಲು ಆದೇಶ ನೀಡಬಾರದು. ಮುಸ್ಲಿಮರೊಡನೆ ವರ್ತನೆ ಮತ್ತು ಮಾತುಕತೆಯಲ್ಲಿ ಉತ್ತಮವಾಗಿ ಮತ್ತು ಸೌಮ್ಯವಾದ ರೀತಿಯನ್ನು

ಕೈಗೊಳ್ಳಿರಿ. (ತಾರೀಖ್ ಅತ್ತಬರಿ, ಸಂಪುಟ-2, ಪುಟ-258-259, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ಕೆಲವು ಸಂಗತಿಗಳನ್ನು ವಿವರಿಸುವುದು ಅವಶ್ಯಕ. ಕೆಲವೊಮ್ಮೆ ಇಸ್ಲಾಮಿನ ಬಗ್ಗೆ ತಪ್ಪಾದ ಅಭಿಪ್ರಾಯವುಂಟಾಗುತ್ತದೆ. ಅದರ ವಿವರಣೆ ಕಳೆದ ಖುತ್ಬದಲ್ಲಿ ಮಾಡಿದ್ದೇನೆ. ಈ ಎಲ್ಲ ಧರ್ಮತ್ಯಾಗಿಗಳು ಯುದ್ಧ ಮಾಡುವವರಾಗಿದ್ದರು. ಇವರು ಯುದ್ಧ ಮಾಡಿದರು ಎಂದು ಮಾತ್ರವಲ್ಲ, ಅವರ ಪ್ರದೇಶಗಳಲ್ಲಿ ಇದ್ದ ಮುಸ್ಲಿಮರ ವಿರುದ್ಧ ದೌರ್ಜನ್ಯ ಮಾಡಿದ್ದರು. ಮುಸ್ಲಿಮರನ್ನು ವಧಿಸಿದರು ಮತ್ತು ಸುಟ್ಟುಹಾಕಿದರು. ಅವರ ಮನೆಗಳನ್ನು ಕೂಡ ಬೆಂಕಿಗೆ ಹಚ್ಚಿದರು. ಅಂತಹವರ ವಿರುದ್ಧ ಖಂಡಿತವಾಗಿಯೂ ಅದೇ ರೀತಿಯಲ್ಲಿ ಪ್ರತೀಕಾರ ಮಾಡಲು ಹಝ್ರತ್ ಅಬೂಬಕರ್(ರ) ಆದೇಶ ನೀಡಿದರು. ಹಝ್ರತ್ ಮಸೀಹ್ ಮೌಊದ್(ಅ) ಕೂಡ ಈ ಪತ್ರವನ್ನು ಉಲ್ಲೇಖಿಸಿರುವರು. ಡಾಕ್ಟರ್ ಅಲಿ ಮುಹಮ್ಮದ್ ಸಲಾಬಿ ಬರೆಯುತ್ತಾರೆ: ಧರ್ಮತ್ಯಾಗಿಗಳನ್ನು ಮತ್ತು ವಿದ್ರೋಹಿಗಳನ್ನು ಬೆಂಕಿಯಿಂದ ಸುಡಲು ಈ ಪತ್ರದಲ್ಲಿ ಹೇಳಲಾಗಿದೆ. ಯಾರಿಗೂ ಬೆಂಕಿಯಿಂದ ಸುಟ್ಟು ಹಾಕುವ ಶಿಕ್ಷೆ ನೀಡುವುದು ಅನುಮತನೀಯವಲ್ಲ. ಬೆಂಕಿಯಿಂದ ಶಿಕ್ಷೆ ನೀಡುವುದು ಕೇವಲ ಅಲ್ಲಾಹನ ಕೆಲಸವಾಗಿದೆ. ಆದರೆ ಇಲ್ಲಿ ಅವರನ್ನು ಸುಟ್ಟು ಹಾಕಲು ಆದೇಶ ಕೊಡಲು ಕಾರಣವೇನೆಂದರೆ, ಆ ದುಷ್ಟರು ಸತ್ಯವಿಶ್ವಾಸಿಗಳೊಂದಿಗೆ ಇದೇ ರೀತಿಯಾಗಿ ವರ್ತಿಸಿದರು. ಆದ್ದರಿಂದ ಪ್ರತೀಕಾರ ನಡೆವಳಿಕೆ ಎಂಬಂತೆ ಹೀಗೆ ಮಾಡಲಾಗಿತ್ತು.

(ಸಯ್ಯದುನಾ ಹಝ್ರತ್ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಪುಟ-293, ಅಲ್‌ಫುರ್ಖಾನ್ ಮುಝಫ್ಫರ್ ಗಡ್ ಪಾಕಿಸ್ತಾನ್)

ಒಬ್ಬನು ಮಾಡುವ ಕೃತ್ಯದ ಪ್ರಕಾರವೇ ಅವನಿಗೆ ಪ್ರತೀಕಾರವೆಂಬಂತೆ ಶಿಕ್ಷೆ ನೀಡಬೇಕು ಎಂದು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿರುವನು. ವಿದ್ರೋಹಿಗಳು ಮುಸ್ಲಿಮರನ್ನು ಸುಟ್ಟುಹಾಕುವ ಮತ್ತು ಅವರನ್ನು ಹೀನಾಯವಾದ ರೀತಿಯಲ್ಲಿ ಕೊಲ್ಲುವ ಅಪರಾಧವನ್ನು ಮಾಡಿದ್ದರು. ಆದ್ದರಿಂದ ಹಝ್ರತ್ ಅಬೂಬಕರ್(ರ) ಅವರನ್ನು ಅದೇ ರೀತಿಯಲ್ಲಿ ವಧಿಸಲು ಮತ್ತು ಮುಸ್ಲಿಮರೊಂದಿಗೆ ವರ್ತಿಸಿದ ರೀತಿಯಲ್ಲೇ ವರ್ತಿಸಲು ಆದೇಶ ನೀಡಿದ್ದರು.

ಈ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್. ರಮಝಾನಿನಲ್ಲಿ ಬಹುಶಃ ಬೇರೆ ವಿಷಯಗಳಲ್ಲೂ ಖುತ್ಬಗಳು ಇರಬಹುದು. ಈ ವಿಷಯವಾಗಿ ಮುಂದೆ ಬರುವ ಖುತ್ಬಗಳಲ್ಲಿ ಇದರ ವಿವರಣೆ ನೀಡಲಾಗುವುದು.

***********

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಮೊದಲನೆಯವನಿಗಿಂತ ಕಠಿಣವಾಗಿತ್ತು ಎನ್ನಲಾಗುವುದಿಲ್ಲ. ಏಕೆಂದರೆ ಮೊದಲ ವ್ಯಕ್ತಿಯೇ ಆತನನ್ನು ಉತ್ತೇಜಿಸಿರುತ್ತಾನೆ. ಆದುದರಿಂದ ಅಲ್ಲಾಹನು ಬಲ್ಲವನಾಗಿದ್ದಾನೆ. ನಮ್ಮದು ಅದೇ ಸ್ಥಿತಿಯಾಗಿದೆ. ಆ ವ್ಯಕ್ತಿಯ ಮೇಲೆ ಒಂದಲ್ಲ ಸಾವಿರ ರೀತಿಯ ವಿಷಾದ ಅವನು ಅದನ್ನು ಮನಗಾಣಲಿಲ್ಲ. ತಿಳಿದು ತಿಳಿದು ಬೇಕಂತಲೇ ತಮ್ಮ ಸ್ವಾರ್ಥದಿಂದಾಗಿ ಸುಳ್ಳನ್ನು ಬಳಸಿದ್ದಾನೆ. ಅಂಜುಮನ್ ಹಿಮಾಯತ್ ಇಸ್ಲಾಂ ಅಥವಾ ಅದರ ಸಹಪಾಠಿಗಳ ಅಭಿಪ್ರಾಯವು 6 ಮೇ 1898 ಪತ್ರಿಕೆ ಅಬ್‌ಝುರವರ್ ರಂತೆಯೇ ಇದ್ದರೆ ಎಲ್ಲ ಕಠಿಣ ಪದಗಳು ಇಸ್ಲಾಂ ಧರ್ಮದ ಒಂದು ಪಂಥವು ನನ್ನ ಕಡೆ ಬೊಟ್ಟು ಮಾಡುತ್ತಿದೆ. ಅವರು ನೋಡಿಕೊಳ್ಳಲಿ. ಅದಕ್ಕಿಂತ ಮೊದಲು ಆರೋಪಿಸುವವರ ಬರಹಗಳು ಸಭ್ಯವಾಗಿದ್ದವು. ಅವರ ಗ್ರಂಥಗಳಲ್ಲಿ ಯಾವ ರೀತಿಯ ಕಠಿಣ ಪದವಿರಲಿಲ್ಲ ಎಂದಾದರೆ ಅದಕ್ಕಿಂತ ಸುಳ್ಳು ಅಧರ್ಮ ಅದನ್ನು ಹೇಳುವ ಅಗತ್ಯವೇ ಇಲ್ಲ. ಪ್ರತಿಯೊಬ್ಬ ವ್ಯಕ್ತಿಯು ಗ್ರಂಥಗಳ ರಚನೆಯ ದಿನಾಂಕವನ್ನು ಸ್ವಯಂ ಪರಿಗಣಿಸಿ ನಿರ್ಣಯಿಸಿಕೊಳ್ಳಲಿ, ನಮ್ಮ ಗ್ರಂಥಗಳು ಮೊದಲು ಕಠಿಣ ಶಬ್ದಗಳನ್ನು ಬಳಸಿ ಬರೆಯಲಾಗಿತ್ತೇ ಅಥವಾ ನಂತರ ರಕ್ಷಣಾತ್ಮಕವಾಗಿ ಬರೆಯಲಾಗಿದೆಯೇ.

**ಒಂದು ಸಾವಿರ ರೂಪಾಯಿಗಳ ವೈಭವಯುತ ಬಹುಮಾನದ ಪಂಥಾಹ್ವಾನ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನಾನು ಸತ್ಯವಾಗಿ ಈ ಮಾತನ್ನು ಬರೆಯಬಯಸುತ್ತೇನೆ.

ಯಾರೊ ಒಬ್ಬರ ದೃಷ್ಟಿಯಲ್ಲಿ ಅಪಶಬ್ದಗಳನ್ನು ಬಳಸುವುದರಲ್ಲಿ ನಾನೇ ಅಡಿಪಾಯ ಹಾಕಿರುತ್ತೇನೆ, ನನ್ನ ಗ್ರಂಥಗಳಿಂದಲೇ ಇತರ ಸಮುದಾಯಗಳಿಗೆ ನೋವುಂಟಾಗಿದೆ, ಅವಹೇಳನ ಮಾಡಲಾಗಿದೆ ಎಂದಾದರೆ ಅವನು 'ಆಬ್‌ಝುರವರ್' ನ ಸಂಪಾದಕನೇ ಆಗಲಿ ಅಥವ ಅಂಜುಮನ್ ಹಿಮಾಯತೆ ಇಸ್ಲಾಂ ಲಾಹೋರಿನ ಯಾವನೇ ಸದಸ್ಯನಾಗಲಿ, ಅವರು ಇವೆಲ್ಲ ಅಶ್ಲೀಲ ಭಾಷೆಗಳಿಗೆ ನಾನೇ ಜವಾಬ್ದಾರ ಎಂದು ಸಾಬೀತುಗೊಳಿಸಲಿ, ಇವೆಲ್ಲ ಅಶ್ಲೀಲ ಭಾಷೆ ಪಾದರಿ ಪಂಡಲ್‌ನಿಂದ ಪ್ರಾರಂಭಗೊಂಡು ಉಮ್ಮಹಾತುಲ್ ಮೂಮಿನೀನ್ ತನಕ ತಲುಪಿತು. ಅಥವಾ ಇಂದ್ರಮನ್‌ನಿಂದ ಪ್ರಾರಂಭಗೊಂಡು ಲೇಖರಾಮನಲ್ಲಿ ಅಂತ್ಯಗೊಂಡಿತು. ನನ್ನ ಕಾರಣ ಇವು ಆರಂಭವಾಗಿವೆ ಎಂದಾದರೆ ಅಂತಹ ವ್ಯಕ್ತಿಗೆ ದಂಡರೂಪದಲ್ಲಿ ಸಾವಿರ ರೂಪಾಯಿ ನಗದು ನೀಡಲು ಸಿದ್ಧನಿದ್ದೇನೆ. (ಅದೇ ಪುಟ 385-389).

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಕೆಲಸಗಳನ್ನು ಮಾಡುತ್ತಾನೆ. ಅವನೂ ಕಷ್ಟಪಟ್ಟು ದುಡಿಯುತ್ತಾನೆ. ಅವನು ಅಲೆದಾಡುತ್ತಾನೆ. ಅವನು ಹರಟೆಯೂ ಸಹ ಹೊಡೆಯುತ್ತಾನೆ. ಮಾನವನ ಮನಸ್ಸು ಅಥವಾ ಅವನ ದೇಹವು ಸಂಪೂರ್ಣವಾಗಿ ಖಾಲಿಯಾಗಿ ಉಳಿಯುವುದಿಲ್ಲ, ಮನುಷ್ಯನು ಏನಾದರೂ ಕೆಲಸ ಮಾಡುತ್ತಿರುತ್ತಾನೆ. ಆದರೆ ಆ ಕೆಲಸಗಳಲ್ಲಿ ಕೆಲವು ಅಸಂಬದ್ಧ ಕೆಲಸಗಳು, ಕೆಲವು ಹಾನಿಕಾರಕ ಮತ್ತು ಕೆಲವು ಉಪಯುಕ್ತ ಮತ್ತು ಕೆಲವು ತುಂಬಾ ಒಳ್ಳೆಯ ಕೆಲಸಗಳಿರುತ್ತವೆ. ಆದರೆ ರಮಝಾನ್ ಒಬ್ಬ ವ್ಯಕ್ತಿಯನ್ನು ಎಂತಹ ಕಾರ್ಯಕ್ಕೆ ಒಗ್ಗುವಂತೆ ಮಾಡುತ್ತದೆ ಎಂದರೆ ಅದು ಅವನನ್ನು ಒಳ್ಳೆಯ ಕಾರ್ಯಗಳಲ್ಲಿ ಕಷ್ಟವನ್ನು ಸಹಿಸಿಕೊಳ್ಳುವಂತೆ ಮಾಡುತ್ತದೆ. ಮಾನವನ ಜೀವನದಲ್ಲಿ ನೆಮ್ಮದಿ ಮತ್ತು ವಿಶ್ರಾಂತಿ ಎಂದರೆ ಏನು? ಅವು ತಿನ್ನುವುದು, ಕುಡಿಯುವುದು, ಮಲಗುವುದು ಮತ್ತು ಸಂಭೋಗಿಸುವುದಾಗಿದೆ. ನಾಗರಿಕತೆಯ ಅತ್ಯುನ್ನತ ರೂಪವೆಂದರೆ ಲೈಂಗಿಕ ಸಂಭೋಗವಾಗಿದೆ, ಇದರಲ್ಲಿ ಸ್ನೇಹಿತರನ್ನು ಭೇಟಿ ಮಾಡುವುದು ಮತ್ತು ಪ್ರೀತಿಪಾತ್ರರ ಜೊತೆ ಸಂಬಂಧವನ್ನು ಒಳಗೊಂಡಿರುತ್ತದೆ. ಆದರೆ ಅತ್ಯಂತ ನಿಕಟವಾದ ಲೈಂಗಿಕ ಸಂಬಂಧವು ಎಂದರೆ ಗಂಡ ಮತ್ತು ಹೆಂಡತಿಯ ನಡುವೆ ಇರುತ್ತದೆ. ಆದ್ದರಿಂದ ಮಾನವನ ಸೌಕರ್ಯವು ಅವನು ತಿನ್ನುವ, ಕುಡಿಯುವ, ಮಲಗುವ ಮತ್ತು ಲೈಂಗಿಕತೆಯ ಕೆಲವು ವಿಷಯಗಳಲ್ಲಿ ಅಡಗಿದೆ. ಸೂಫಿಸಂನ ಆತ್ಮವು ಕಡಿಮೆ ಮಾತನಾಡುವುದು, ಕಡಿಮೆ ತಿನ್ನುವುದು ಮತ್ತು ಕಡಿಮೆ ನಿದ್ರೆ ಮಾಡುವುದು ಎಂದು ಕೆಲವು ಸೂಫಿಗಳು ಹೇಳಿದ್ದಾರೆ ಮತ್ತು ರಮಝಾನ್ ಈ ಸೂಫಿಸಂನ ಸಂಪೂರ್ಣ ಆತ್ಮದ ಸಾರವನ್ನು ಒಳಗೊಂಡಿದೆ. ಕಡಿಮೆ ನಿದ್ರೆ ಮಾಡುವುದು ಇದರಲ್ಲಿ ಒಳಗೊಂಡಿದೆ ಅದು ಹೇಗೆ ಎಂದರೆ ರಾತ್ರಿ ಹೊತ್ತು ತಹಜ್ಜುದ್ ನಮಾಝ್ ನಿರ್ವಹಿಸುದಕ್ಕೆ ಏಳುವುದು. ದಿನವಿಡೀ ಹಸಿವಿನಿಂದ ಇರಬೇಕಾದ ಕಾರಣ ಕಡಿಮೆ ತಿನ್ನುವುದು ಸ್ಪಷ್ಟವಾಗಿದೆ. ಮತ್ತು ಲೈಂಗಿಕತೆಯ ಕೊರತೆಯು ಸ್ಪಷ್ಟವಾಗಿದೆ. ನಂತರ ರಮಝಾನ್‌ನಲ್ಲಿ ಕಡಿಮೆ ಮಾತು ಬರುತ್ತದೆ ಎಂದು ಸಹ ಸ್ಪಷ್ಟವಾಗಿದೆ. ಆದ್ದರಿಂದ ಪ್ರವಾದಿ(ಸ) ಒಮ್ಮೆ ಉಪವಾಸ ಎಂದರೆ ತಿನ್ನುವುದು ಮತ್ತು ಕುಡಿಯುವುದರಿಂದ ದೂರಿರುವುದಲ್ಲ, ಬದಲಿಗೆ ಉಪವಾಸ ಎಂದರೆ ನೀವು ಮೌಢ್ಯವನ್ನು ಹೇಳಬಾರದು. ಆದುದರಿಂದ ಉಪವಾಸಿಗನು ಮೌಢ್ಯಗಳನ್ನು ತಪ್ಪಿಸುವುದು, ಜಗಳಗಳಿಂದ ತಪ್ಪಿಸಿ ಕೊಳ್ಳುವುದು ಮತ್ತು ಅಂತಹ ಮೌಢ್ಯಗಳಿಂದ ದೂರವಿರುವುದು ಅವಶ್ಯಕವಾಗಿರುತ್ತದೆ. ಈ ರೀತಿ ಕಡಿಮೆ ಮಾತನಾಡುವುದು ರಮಝಾನ್‌ನಲ್ಲಿ ಬಂದಿದೆ. ಕಡಿಮೆ ತಿನ್ನುವುದು, ಕಡಿಮೆ ಮಾತನಾಡುವುದು, ಕಡಿಮೆ ನಿದ್ದೆ ಮಾಡುವುದು ಮತ್ತು ಕಡಿಮೆ ಸಂಭೋಗ ಮಾಡುವುದು ಈ ನಾಲ್ಕು ಮಾತುಗಳು ರಮಝಾನ್‌ನಲ್ಲಿ ಒಟ್ಟಿಗೆ ಬಂದಂತೆ ಇದೆ. ಮತ್ತು ಈ ನಾಲ್ಕು ವಿಷಯಗಳು ಬಹಳ ಮುಖ್ಯವಾಗಿವೆ ಮತ್ತು ಮಾನವ ಜೀವನವು ಅವುಗಳಿಗೆ ನಿಕಟ ಸಂಬಂಧ ಹೊಂದಿದೆ, ಅವನು ಕಷ್ಟಗಳನ್ನು ಜಯಿಸಲು ಮತ್ತು ಯಶಸ್ಸನ್ನು ಸಾಧಿಸಲು ನಿರ್ವಹಿಸುತ್ತಾನೆ.

**(ತಫ್ಸೀರ್ ಕಬೀರ್, ಸಂಪುಟ-2, ಪುಟ 376, ಖಾದಿಯಾನ್, 2010)**

**ಪವಿತ್ರ ಖುರ್‌ಆನ್**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ. ***(ಮಲ್‌ಫೂಝಾತ್ ಸಂಪುಟ-2, ಪುಟ-344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು "ಹಕಮ್" ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು "ಮುಹೈಮಿನ್" ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಿಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ. **(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖಝಾಇನ್ ಸಂಪುಟ-16, ಪುಟ-103)**

# ಅಲ್ಲಾಹನು ಪವಿತ್ರ ಖುರ್‌ಆನ್‌ನ ರಕ್ಷಕನಾಗಿದ್ದಾನೆ.

(ಪವಿತ್ರ ಖುರ್‌ಆನ್‌ನ 26 ವಚನಗಳ ಕುರಿತು ಎತ್ತಿದ ಆಕ್ಷೇಪದ ಉತ್ತರ)

ಮುಹಮ್ಮದ್ ಹಮೀದ್ ಕೌಸರ್,
ನಾಝಿರ್ ದಾವತ್ ಇಲಲ್ಲಾಹ್ ಉತ್ತರ ಭಾರತ, ಖಾದಿಯಾನ್.

(ಭಾಗ: 2)

**ಜಿಬ್ರೀಲ್ ಅಲೈಹಿಸ್ಸಲಾಮ್ ಅವರ ಮೂಲಕ ಪವಿತ್ರ ಖುರ್‌ಆನಿನ ಸಂರಕ್ಷಣೆ**

ಸರ್ವಶಕ್ತನಾದ ಅಲ್ಲಾಹನು, ಸುರಕ್ಷತೆ ಮತ್ತು ತೀವ್ರ ಎಚ್ಚರಿಕೆಯ ದೃಷ್ಟಿಯಿಂದ, ಹಝ್ರತ್ ಜಿಬ್ರೀಲ್ ಮತ್ತು ಸೈಯದುನ ಮುಹಮ್ಮದ್(ಸ) ಅವರು ಪ್ರತಿ ರಂಜಾನ್‌ನಲ್ಲಿ ಅಲ್ಲಿಯ ವರೆಗೆ ಎಷ್ಟು ಖುರ್‌ಆನ್ ಅವರಿಸುದ್ದೇಯೋ ಅಷ್ಟನ್ನು ಪುನರಾವರ್ತಿಸುತ್ತಿದ್ದರು ತದನಂತರ ಪ್ರವಾದಿ(ಸ) ಅವರ ಜೀವನದ ಕೊನೆಯ ವರ್ಷವಾಗಿದ್ದಾಗ ಪವಿತ್ರ ಖುರ್‌ಆನ್ ಅನ್ನು ಎರಡು ಸಲ ಪುನರಾವರ್ತಿಸಿದರು. ಆದ್ದರಿಂದ ಉಮ್ಮು ಅಲ್-ಮುಮಿನೀನ್ ಹಝ್ರತ್ ಆಯಿಶಾ(ರ.ಅ) ಹೇಳುತ್ತಾರೆ ಹಝ್ರತ್ ಫಾತಿಮಾ(ರ.ಅ) ಹೇಳಿದರು ಪವಿತ್ರ ಪ್ರವಾದಿ(ಸ) ರವರು ನನ್ನ ಕಿವಿಯಲ್ಲಿ ಹೇಳಿದರು ಪ್ರತಿ ವರ್ಷ ಜಿಬ್ರೀಲ್(ಅ) ನನ್ನೊಂದಿಗೆ ಒಂದು ಬಾರಿ ಖುರ್‌ಆನ್ ಪಠಿಸುತ್ತಿದ್ದರು. ಆದರೆ ಈ ವರ್ಷ ಅವರು ಎರಡು ಬಾರಿ ಪಠಿಸಿದರು, ನನ್ನ ನಿಧನದ ಸಮಯ ಹತ್ತಿರದಲ್ಲಿದೆ ಎಂದು ನಾನು ಭಾವಿಸುತ್ತೇನೆ.

**ಇನ್ನ ಜಿಬ್ರೀಲ ಕಾನ ಯುಆರಿಝುನೀಲ್ ಖುರ್‌ಆನ ಕುಲ್ಲ ಸನತಿನ್ ವ ಇನ್ನಹು ಆರಝನೀಲ್ ಆಮ ಮರ್ರತೈನಿ (ಸಹೀಹ್ ಬುಖಾರಿ, ಕಿತಾಬುತ್ತಫ್ಸೀರ್)**

ಅನುವಾದ: ಹಝ್ರತ್ ಆಯೇಶಾ(ರ) ಅವರು ವರದಿ ಮಾಡುತ್ತಾರೆ ಪ್ರವಾದಿ(ಸ)ರವರು ತಾವು ಮರಣಹೊಂದಿದ ತಮ್ಮ ಅನಾರೋಗ್ಯದಲ್ಲಿ ತಮ್ಮ ಮಗಳು ಹಝ್ರತ್ ಫಾತಿಮಾ(ರ) ಅವರಿಗೆ ಹೇಳಿದರು: ಪ್ರತಿ ವರ್ಷ ಜಿಬ್ರೀಲ್(ಅ) ನನ್ನೊಂದಿಗೆ ಒಂದು ಬಾರಿ ಖುರ್‌ಆನ್ ಪಠಿಸುತ್ತಿದ್ದರು. ಆದರೆ ಈ ವರ್ಷ ಅವರು ಎರಡು ಬಾರಿ ಪಠಿಸಿದರು,

ಈಗ, ಈ ದೈವಿಕ ಏರ್ಪಾಡಿನ ನಂತರ, ಪ್ರಸ್ತುತ ಖುರ್‌ಆನಿನಲ್ಲಿ ಯಾವುದೇ ಹೆಚ್ಚಳ ಅಥವಾ ಕಡಿಮೆಯಾಗುವ ಸಾಧ್ಯತೆಯಿಲ್ಲ.

**ಪವಿತ್ರ ಖುರ್‌ಆನಿನ ಸಂರಕ್ಷಣೆಯ ಕುರಿತು ಪೌರಸ್ತ್ಯರು ಸಹ ಒಪ್ಪಿಕೊಳ್ಳುತ್ತಾರೆ**

ಇಂದು ಮುಸಲ್ಮಾನರ ಕೈ ಮತ್ತು ಹೃದಯಗಳಲ್ಲಿ ಭದ್ರವಾಗಿರುವ ಪವಿತ್ರ ಖುರ್‌ಆನ್ ಪ್ರವಾದಿ ಮುಹಮ್ಮದ್(ಸ) ಅವರಿಗೆ ಅವತೀರ್ಣವಾದ ಖುರಾನ್ ಆಗಿದೆ ಎಂದು ಪೌರಸ್ತ್ಯರು (ಓರಿಯಂಟಲಿಸ್ಟ್‌ಗಳು) ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ ಎಂಬುದನ್ನೂ ಇಲ್ಲಿ ಉಲ್ಲೇಖಿಸಬೇಕಾಗಿದೆ.

ಸರ್ ವಿಲಿಯಂ ಮ್ಯೂರ್ ಅವರ ಅಭಿಪ್ರಾಯ: ಸರ್ ವಿಲಿಯಂ ಮ್ಯೂರ್ ಬರೆಯುತ್ತಾರೆ: "ಪ್ರಪಂಚದ ಪರದೆಯ ಮೇಲೆ ಯಾವುದೇ ವಿರೂಪ ಅಥವಾ ಬದಲಾವಣೆಯಿಲ್ಲದೆ ಹನ್ನೆರಡು ನೂರು ವರ್ಷಗಳ ಸುದೀರ್ಘ ಅವಧಿಯವರೆಗೆ ಅದರ ಮೂಲ ರೂಪದಲ್ಲಿ ಸಂರಕ್ಷಿಸಲ್ಪಟ್ಟಿರುವ ಪವಿತ್ರ ಖುರಾನ್ ಹೊರತುಪಡಿಸಿ ಯಾವುದೇ ಗ್ರಂಥವಿಲ್ಲ. ನಂತರ ಅವರು ಬರೆಯುತ್ತಾರೆ: **"ನಮ್ಮ ಇಂಜೀಲ್‌ಗಳನ್ನು ಮುಸ್ಲಿಮರು ಪಠಿಸುತ್ತಿರುವ ಪವಿತ್ರ ಖುರ್‌ಆನ್‌ನೊಂದಿಗೆ ಹೋಲಿಸುವುದು ಪರಸ್ಪರ ಸಂಬಂಧವಿಲ್ಲದ ಎರಡು ವಿಷಯಗಳ ಹಾಗಿದೆ."** ನಂತರ ಅವರು ಬರೆಯುತ್ತಾರೆ: "ಪ್ರವಾದಿ ಮುಹಮ್ಮದ್(ಸ) ಪವಿತ್ರ ಖುರ್‌ಆನ್ ಅನ್ನು ಜಗತ್ತಿಗೆ ಪ್ರಸ್ತುತಪಡಿಸಿದ ರೂಪದಲ್ಲಿ ಇನ್ನೂ ಇದೆ ಎಂಬುದಕ್ಕೆ ಸಂಪೂರ್ಣ ಆಂತರಿಕ ಮತ್ತು ಬಾಹ್ಯ ಸಾಕ್ಷ್ಯಗಳಿವೆ." ನಂತರ ಅವರು ಬರೆಯುತ್ತಾರೆ: ಪವಿತ್ರ ಖುರ್‌ಆನ್‌ನ ಪ್ರತಿಯೊಂದು ಆಯತ್‌ಗಳ ಬಗ್ಗೆ ನಾವು ಖಚಿತವಾಗಿ ಹೇಳಬಹುದೆಂದರೆ ಅದು ಮುಹಮ್ಮದ್‌ನಿಂದ ಇಂದಿನವರೆಗೆ ಅದರ ಮೂಲ ಮತ್ತು ಬದಲಾಗದ ರೂಪದಲ್ಲಿ ಉಳಿದು ಬಂದಿದೆ. (ಉಲ್ಲೇಖ ಲೈಫ್ ಆಫ್ ಮುಹಮ್ಮದ್ ಮುನ್ನುಡಿ ಪುಟ 21, 22, 25, 26)

ನೋಲ್ಡಕ್ ಕೀ ಅವರ ಅಭಿಪ್ರಾಯ: ಜರ್ಮನಿಯ ಪ್ರಸಿದ್ಧ ಕ್ರೈಸ್ತ ಪೌರಸ್ತ್ಯ (ಓರಿಯಂಟಲಿಸ್ಟ್) ಆಗಿರುತ್ತಾರೆ ಅವರು ಈ ಕಲೆಯಲ್ಲಿ ಮಾಸ್ಟರ್ ಎಂದು ಪರಿಗಣಿಸಲ್ಪಟ್ಟಿರುವ ನೋಲ್ಡ್ ಕೀ ಪವಿತ್ರ ಖುರ್‌ಆನ್ ಬಗ್ಗೆ ಬರೆಯುತ್ತಾರೆ: ಪ್ರಸ್ತುತ ಕಾಲದಲ್ಲಿರುವ ಪವಿತ್ರ ಖುರ್‌ಆನ್ ಸಹಾಬರವರ ಕಾಲದಲ್ಲಿದ್ದ ಖುರ್‌ಆನ್‌ನ ರೂಪದಲ್ಲಿಯೇ ಉಳಿದಿದೆ. ಅದೇ ರೀತಿ ಅವರು ಬರೆಯುತ್ತಾರೆ: "ಯುರೋಪಿಯನ್ ವಿದ್ವಾಂಸರ ಪವಿತ್ರ ಖುರ್‌ಆನಿನಲ್ಲಿ ಬದಲಾವಣೆಯಾಗಿದೆ ಎಂದು ಸಾಬೀತು ಪಡಿಸುವ ಪ್ರಯತ್ನ ಖಂಡಿತವಾಗಿಯು ವಿಫಲವಾಗಿದೆ. (ಎನ್ಸೈಕ್ಲೋಪೀಡಿಯಾ ಬ್ರಿಟಾನಿಕಾ ಖುರ್‌ಆನ್ ಪದದ ಅಡಿಯಲ್ಲಿ)

ಪ್ರೊಫೆಸರ್ ನಿಕೋಲ್ಸನ್ ಅವರ ಅಭಿಪ್ರಾಯ: ನಂತರ ಪ್ರಸಿದ್ಧ ಇಂಗ್ಲಿಷ್ ಕ್ರಿಶ್ಚಿಯನ್ ಓರಿಯೆಂಟಲಿಸ್ಟ್ ಆಫ್ ಇಂಗ್ಲೆಂಡಿನ ಪ್ರೊಫೆಸರ್ ನಿಕೋಲ್ಸನ್ ತಮ್ಮ ಇಂಗ್ಲಿಷ್ ಪುಸ್ತಕ "ಲಿಟರರಿ ಹಿಸ್ಟರಿ ಆಫ್ ಅರೇಬಿಯಾ" ನಲ್ಲಿ ಬರೆಯುತ್ತಾರೆ: ಇಸ್ಲಾಮ್ ಧರ್ಮದ ಪ್ರಾಚೀನ ಇತಿಹಾಸದ ಬಗ್ಗೆ ತಿಳಿಯಲು ಪವಿತ್ರ ಖುರ್‌ಆನ್ ಅದ್ಭುತ ಮತ್ತು ಯಾವುದೇ ಅವಮಾನ ಇಲ್ಲದ ಗ್ರಂಥವಾಗಿದೆ. ಮತ್ತು ನಿಸ್ಸಂದೇಹವಾಗಿಯೂ ಬೌದ್ಧಧರ್ಮ ಅಥವಾ ಕ್ರಿಶ್ಚಿಯನ್ ಧರ್ಮ ಅಥವಾ ಯಾವುದೇ ಪ್ರಾಚೀನ ಧರ್ಮವು ಇಸ್ಲಾಂ ಧರ್ಮದಲ್ಲಿ ಇರುವಂತಹ ಅಧಿಕೃತ ಆಧುನಿಕ ದಾಖಲೆಯನ್ನು ಹೊಂದಿಲ್ಲ.**"** (ಅರಬ್ ಕೀ ಅದಬಿ ತಾರೀಖ್)

ವಿರೋಧಿಗಳ ಅಭಿಪ್ರಾಯಗಳ ನಂತರ, **ಅಲ್-ಫಜಲ್ ಮಾ ಶಾಹಿದತ್ ಬಿಹಿ ಅಲ್-ಆದಾ** ಎಂದು ಬಹಿರಂಗವಾಗಿ ಹೇಳಬಹುದು. ಸದ್ಗುಣವೆಂದರೆ ಶತ್ರುಗಳು ಸಾಕ್ಷಿಯಾಗುತ್ತಾರೆ.

**(ಆಕ್ಷೇಪಣೆ ಸಂಖ್ಯೆ 2)**

ಆಕ್ಷೇಪಿಸುವವರು ಸಹೀಹ್ ಬುಖಾರಿಯ ಕರಲವು ಹದೀಸ್‌ಗಳನ್ನು ಉಲ್ಲೇಖಿಸಿ ಪ್ರವಾದಿ ಮುಹಮ್ಮದ್(ಸ) ರವರ ನಂತರ ಪ್ರವಾದಿ(ಸ)ರವರ ಸಂದೇಶವನ್ನು ತಿಳಿದ ನಾಲ್ಕು ಸಹಾಬಿಗಳು ಅವರು ಅನ್ಸಾರ್‌ಗಳಾಗಿದ್ದರು ಇವರು ಪವಿತ್ರ ಖುರ್‌ಆನ್ ಅನ್ನು ಸಂಗ್ರಹಿಸಿದರು ತದ ನಂತರ ಹಝ್ರತ್ ಅಬು ದರ್ದಾ(ರ) ಅವರನ್ನು ಉಲ್ಲೇಖಿಸಿದ್ದಾರೆ ಎಂದು ಆಕ್ಷೇಪಕ ಬರೆದಿದ್ದಾರೆ.

**ಉತ್ತರ:** ಆಕ್ಷೇಪಿಸುವವರ ಆಕ್ಷೇಪಣೆಗೆ ಪ್ರತಿಕ್ರಿಯೆಯಾಗಿ ಬರಿಯುವುದೇನೆಂದರೆ, ಪ್ರವಾದಿ ಮುಹಮ್ಮದ್(ಸ) ಅವರ ಜೀವನದ ಕೊನೆಯ ದಿನಗಳಲ್ಲಿ, ಮುಸಲ್ಮಾ (ಸುಳ್ಳುಗಾರ) ಎಂಬ ವ್ಯಕ್ತಿ ಪ್ರವಾದಿತ್ವವನ್ನು ಘೋಷಿಸಿದನು ಮತ್ತು ಪ್ರವಾದಿ ಮುಹಮ್ಮದ್(ಸ) ಅವರ ಮರಣದ ನಂತರ ಅವನು ಇಸ್ಲಾಮಿಕ್ ಸ್ಟೇಟ್ ವಿರುದ್ಧ ಬಂಡಾಯವೆದ್ದನು. ಇತನು ಯಮಾಮ ನಿವಾಸಿಯಾಗಿದ್ದನು. ಅವನ ದಂಗೆಯ ಪರಿಣಾಮವು ಹರಡಲು ಪ್ರಾರಂಭಿಸಿದಾಗ ಮತ್ತು ಅದು ದೇಶದ್ರೋಹಕ್ಕೆ ಕಾರಣವಾದಾಗ, ಹಝ್ರತ್ ಅಬು ಬಕರ್(ರ)ರವರು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರನ್ನು ಹದಿಮೂರು ಸಾವಿರ (13000) ಮುಸ್ಲಿಮರ ಸೈನ್ಯದೊಂದಿಗೆ ಅವನನ್ನು ಶಕ್ತಿದಮನ ಮಾಡಲು ಕಳುಹಿಸಿದರು. ಮುಸಲ್ಮಾ ಕಝ್ಝಾಬ್ ತನ್ನ ನಲವತ್ತು ಸಾವಿರ (40,000) ಸೈನಿಕರೊಂದಿಗೆ ಖಾಲಿದ್ ಬಿನ್ ವಲೀದ್ ಅವರ ಸೈನ್ಯದೊಂದಿಗೆ ಹೋರಾಡಿದನು ಹೀಗೆ ಎರಡು ಕಡೆಯ ನಡುವೆ ಭೀಕರ ಯುದ್ಧವು ನಡೆಯಿತು, ಇದರಲ್ಲಿ ಅನೇಕ ಸಹಚರರು ಶಹೀದ್ ಆದರು. ಈ ಸಹಚರರಲ್ಲಿ ಅನೇಕ ಪವಿತ್ರ ಖುರ್‌ಆನಿನ ಹಾಫಿಝ್‌ಗಳು ಹಾಗೂ ಖಾರಿಗಳೂ ಇದ್ದರು. ಬುಖಾರಿಯಲ್ಲಿ ಒಂದು ವರದಿ ಹೀಗಿದೆ: ಹಝ್ರತ್ ಝೈದ್ ಬಿನ್ ಸಾಬಿತ್(ರ) ವರದಿ ಮಾಡುತ್ತಾರೆ, ಈ ಘಟನೆಯ ನಂತರ ಹಝ್ರತ್ ಅಬು ಬಕರ್(ರ) ಅವರು ನನ್ನನ್ನು ತಮ್ಮ ಬಳಿಗೆ ಕರೆದರು. ಆ ಸಮಯದಲ್ಲಿ ಹಝ್ರತ್ ಉಮರ್ ಬಿನ್ ಅಲ್-ಖತ್ತಾಬ್(ರ) ಕೂಡ ನಿಮ್ಮ ಜೊತೆಗಿದ್ದರು. ಹಝ್ರತ್ ಅಬು ಬಕರ್(ರ) ನನ್ನನ್ನು ಉದ್ದೇಶಿಸಿ ಅಂದರೆ ಝೈದ್ ಬಿನ್ ಸಾಬಿತ್ ಅವರನ್ನು ಹೇಳಿದರು: ಹಝ್ರತ್ ಉಮರ್(ರ) ನನ್ನ ಬಳಿಗೆ ಬಂದು ಬಂದು ಯಮಾಮಾ ಯುದ್ಧದಲ್ಲಿ ಅನೇಕ ಖುರ್‌ಆನ್ ಕಂಠಪಾಠಿಗಳು(ಹಾಫಿಝ್ ಖುರ್‌ಆನ್) ಶಹೀದ್ ಆಗಿದ್ದಾರೆ ಅದೇ ರೀತಿ ಅನೇಕ ಸ್ಥಳಗಳಲ್ಲಿ ಪವಿತ್ರ ಖುರ್‌ಆನ್‌ನ ಪುರಾತನ ಕಂಠಪಾಠಿಗಳು ಹಾಗೂ ಖಾರಿಗಳು ಶಹೀದ್ ಆಗುತ್ತಿದ್ದಾರೆ ಮತ್ತು ಮರಣ ಹೊಂದುತ್ತಲೇ ಹೋಗುತ್ತಿದ್ದಾರೆ ಎಂದು ಹೇಳಿದರು. ಆದ್ದರಿಂದ, ಪವಿತ್ರ ಖುರ್‌ಆನ್‌ನನ್ನು ಸಂಕಲನಗೊಳಿಸಲು ಆದೇಶಿಸಲು ನಾನು ನಿಮ್ಮನ್ನು ವಿನಂತಿಸುತ್ತೇನೆ. ಅದಕ್ಕೆ ನಾನು ಹಝ್ರತ್ ಉಮರ್(ರ) ಅವರನ್ನು ನಾನು ರಸೂಲ್(ಸ) ಮಾಡದೇ ಇರುವ ಕಾರ್ಯವನ್ನು ನಾನು ಹೇಗೆ ಮಾಡಲಿ? ಎಂದು ಉತ್ತರಿಸಿದೆ. ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನ ಆಣೆ, ಆದರೂ ಇದು ಒಳ್ಳೆಯ ಕಾರ್ಯವಾಗಿದೆ, ಹಝ್ರತ್ ಉಮರ್(ರ)ರವರು ಇದರ ಬಗ್ಗೆ ಮತ್ತೆ ಮತ್ತೆ ಹೇಳುತ್ತಿದ್ದರು. ತದನಂತರ ಅಲ್ಲಾಹನು ನನ್ನ ಮನಸ್ಸನ್ನು ತೆರೆದನು. ಹಝ್ರತ್ ಅಬು ಬಕರ್(ರ)ರವರ ಈ ಮಾತುಗಳು ಗಮನಾರ್ಹವಾಗಿದೆ.

**ಹತ್ತಾ ಶರಹಲ್ಲಾಹು ಸದ್‌ರಿ ಲಿಝಾಲಿಕ** (ಬುಖಾರಿ ಕಿತಾಬ್ ಅಲ್-ತಫ್ಸಿರ್ ಬಾಬ್ ಜುಮಾ ಅಲ್-ಕುರಾನ್) ಅಂದರೆ ಅಲ್ಲಾಹನು ಪವಿತ್ರ ಖುರ್‌ಆನ್ ಅನ್ನು ಸಂಕಲನಗೊಳಿಸಲು ಹಝ್ರತ್ ಅಬು ಬಕರ್(ರ) ಅವರ ಮನಸ್ಸನ್ನು ತೆರೆದನು. ಪ್ರವಾದಿ ಮುಹಮ್ಮದ್(ಸ) ಅವರ ಮೊದಲ

ಖಲೀಫ ಅವರ ಬಗ್ಗೆ ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದನು: **ಸಾನಿಯಸ್ನೈನಿ ಇಝ್‌ಹುಮಾ ಫಿಲ್‌ಗಾರಿ** (ಅಲ್‌ಅನ್‌ಕಬೂತ್:40) ಇಬ್ಬರಲ್ಲಿ ಒಬ್ಬರು. ಪವಿತ್ರ ಖುರ್‌ಆನ್ ಅನ್ನು ಅವತರಿಸಿದ ಅಲ್ಲಾಹನು ಅವರ ಮನಸ್ಸನ್ನು ತೆರೆದನು ಮತ್ತು ಅವರ ಮೂಲಕವೇ ತನ್ನ ವಾಗ್ದಾನವನ್ನು ಪೂರೈಸಿದನು **"ವ ಇನ್ನಾ ಲಹೂ ಲಹಾಫಿಝೂನ್"** (ಸೂರ: ಅಲ್‌ಹಿಜರ್: 11) **ಇನ್ನ ಅಲೈನಾ ಜಮ್‌ಅಹೂ ವ ಖುರ್‌ಆನಹೂ** (ಅಲ್‌ಖ್ಯೆಯಿಮ: 18)

ಪವಿತ್ರ ಖುರ್‌ಆನ್ ಅನ್ನು ಪುನರುತ್ಥಾನದ ದಿನದವರೆಗೆ ಇರಿಸುವುದು, ಸಂಕಲಿಸುವುದು ಮತ್ತು ಸಂರಕ್ಷಿಸುವುದು ಅಲ್ಲಾಹನ ಜವಾಬ್ದಾರಿಯಾಗಿದೆ. ಬುಖಾರಿಯಲ್ಲಿ ಒಂದು ವರದಿ ಹೀಗಿದೆ: ಬೇರೆ ಬೇರೆ ಸ್ಥಳಗಳಲ್ಲಿ ಬರಹದ ರೂಪದಲ್ಲಿರುವ ಪವಿತ್ರ ಖುರ್‌ಆನ್ ಅನ್ನು ಒಂದು ಕಡೆ ಸಂಕಲಿಸುವುದಕ್ಕೆ ಅಲ್ಲಾಹನು ಹಝ್ರತ್ ಝೈದ್ ಬಿನ್ ಸಾಬಿತ್(ರ)ರವರನ್ನು ಮನಸ್ಸಿಗೆ ಅರ್ಥೈಸಿದನು ಅವರು ಪವಿತ್ರ ಖುರ್‌ಆನ್ ಅನ್ನು ತಾಳೆ (ಮರದ) ಫಲಕಗಳು ಮತ್ತು ಕಲ್ಲಿನ ಸ್ಲೇಟುಗಳು ಮತ್ತು ಜನರ ಹೃದಯಗಳಲ್ಲಿ ಸಂರಕ್ಷಿಸಿ ಒಂದುಗೂಡಿಸಿದರು.

ಗಮನಿಸಬೇಕಾದ ವಿಷಯವೆಂದರೆ ಹಝ್ರತ್ ಝೈದ್ ಬಿನ್ ಸಾಬಿತ್(ರ) ಅವರು ಪವಿತ್ರ ಖುರ್‌ಆನ್ ಅನ್ನು ರಹಸ್ಯವಾಗಿ ಒಂದುಗೂಡಿಸುವ ಈ ಕಾರ್ಯವನ್ನು ನಿರ್ವಹಿಸಲಿಲ್ಲ ಅದರ ಬದಲು ಅವರು ಮದೀನಾದಲ್ಲಿ ಕುಳಿತು ತಮ್ಮ ಈ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು ಮತ್ತು ಆ ಸಮಯದಲ್ಲಿ ಮದೀನಾದಲ್ಲಿ ಹಝ್ರತ್ ಉಮರ್(ರ), ಹಝ್ರತ್ ಉಸ್ಮಾನ್(ರ), ಹಝ್ರತ್ ಅಲಿ(ರ) ಮತ್ತು ದೊಡ್ಡ ದೊಡ್ಡ ಸಹಾಬರವರು ಸಹ ಉಪಸ್ಥಿತರಿದ್ದರು, ಅವರ ಉಪಸ್ಥಿತಿಯಲ್ಲಿ ಯಾವುದೇ ಸೇರ್ಪಡೆ ಅಥವಾ ಅಳಿಸುವಿಕೆಗೆ ಯಾವುದೇ ಸಾಧ್ಯತೆ ಇರಲಿಲ್ಲ ಮತ್ತು ಅಂತಹ ಅನುಮಾನವನ್ನು ಯಾರೂ ವ್ಯಕ್ತಪಡಿಸಲಿಲ್ಲ. ಮತ್ತು ಪವಿತ್ರ ಖುರ್‌ಆನ್‌ನ ಈ ದೃಢೀಕರಿಸಿದ ಪ್ರತಿಗಳನ್ನು ಪ್ರವಾದಿ ಮುಹಮ್ಮದ್(ರ) ಅವರ ಮಡದಿ ಹಾಗೂ ಹಝ್ರತ್ ಉಮರ್(ರ)ರವರ ಪುತ್ರಿಯಾದ ಹಝ್ರತ್ ಉಮ್ಮುಲ್ ಮುಮಿನೀನ್ ಹಝ್ರತ್ ಹಫ್ಸ(ರ)ರವರ ಬಳಿ ರಕ್ಷಣೆಯಲ್ಲಿ ಇರಿಸಲಾಯಿತು. ಮತ್ತು ಹಝ್ರತ್ ಉಸ್ಮಾನ್(ರ) ಅವರ ಖಲೀಫತ್ ಅವಧಿಯಲ್ಲಿ ಇಸ್ಲಾಮಿಕ್ ಸರ್ಕಾರದ ಗಡಿಗಳು ಅರಬ್ ಅಲ್ಲದ ಪ್ರದೇಶಗಳ ತನಕ ವಿಸ್ತಾರಗೊಂಡಾಗ ಮತ್ತು ಅರಬ್ಬರಲ್ಲದವರು ಮತ್ತು ದೂರದ ಅರಬ್ ಬುಡಕಟ್ಟು ಜನರು ಇಸ್ಲಾಂಗೆ ಸೇರ್ಪಡೆಯಾದರು. ಅರ್ಮೇನಿಯಾ ಮತ್ತು ಅಜೆರ್ಬೈಜಾನ್ ಸಹ ಇಸ್ಲಾಂಗೆ ಮತಾಂತರಗೊಂಡಾಗ, ಮೂಲ ಅಧಿಕೃತ ಪವಿತ್ರ ಖುರ್‌ಆನ್‌ನ ಪ್ರತಿಗಳನ್ನು ವಿವಿಧ ದೇಶಗಳಿಗೆ ಕಳುಹಿಸುವುದು ಸೂಕ್ತ ಮತ್ತು ಅಗತ್ಯವೆಂದು ಪರಿಗಣಿಸಲಾಯಿತು. ಹೀಗೆ ಹಝ್ರತ್ ಉಸ್ಮಾನ್(ರ)ರವರು ಪವಿತ್ರ ಖುರ್‌ಆನ್‌ನ ಮೂಲ ಪ್ರತಿಯನ್ನು ಹಝ್ರತ್ ಹಫ್ಸ(ರ)ಅವರಿಂದ ತರಿಸಿ ಹಝ್ರತ್ ಝೈದ್ ಬಿನ್ ಸಾಬಿತ್(ರ), ಹಝ್ರತ್ ಅಬ್ದುಲ್ಲಾ ಬಿನ್ ಝುಬೈರ್(ರ), ಹಝ್ರತ್ ಸೀದ್ ಬಿನ್ ಆಸ್(ರ(), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಅಲ್‌ಹಾರಿಸ್(ರ) ಅವರನ್ನು ಅದರ ನಕಲು ಮಾಡಲು ಆದೇಶಿಸಿದರು, ಆದ್ದರಿಂದ ಅವರು ಅದರ ನಕಲುಗಳನ್ನು ಮಾಡಿದರು ಮತ್ತು ಮದೀನಾ ಮುನಾವ್ವರದಲ್ಲಿ ಹಿರಿಯ ಸಹಾಬ ಅವರ ಸಮ್ಮುಖದಲ್ಲಿ ಇದೆಲ್ಲವೂ ಸಂಭವಿಸಿತು. ಅದೇ ರೀತಿ ಪವಿತ್ರ ಖುರ್‌ಆನ್‌ನ ಮೂಲ ಪ್ರತಿಯನ್ನು ಹಝ್ರತ್ ಹಫ್ಸಾ(ರ) ಅವರಿಗೆ ಹಿಂದಿರುಗಿಸಲಾಯಿತು. (ಬುಖಾರಿ, ಕಿತಾಬ್ ಅಲ್-ತಫ್ಸಿರ್) ಆಕ್ಷೇಪಿಸುವವನ ಸಂಪೂರ್ಣ ಗಮನವೂ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಸ್ಮಾನ್(ರ)ರವರ ಖಿಲಾಫತ್ ಅವಧಿಯಲ್ಲಿ ಪವಿತ್ರ ಖುರ್‌ಆನ್ ಅನ್ನು ಸಂಗ್ರಹಿಸಲಾಯಿತು ಮತ್ತು ಅದರ ಪ್ರತಿಗಳನ್ನು ಮಾಡಿರುವ ಕಡೆ ಇತ್ತು ಅವನು ಸ್ವತಃ ತಪ್ಪು ಗ್ರಹಿಯಲ್ಲಿದ್ದು ಬೇರೆಯವರನ್ನು ಸಹ ತಪ್ಪಾಗಿಸುವ ಪ್ರಯತ್ನದಲ್ಲಿದ್ದನು. ಪವಿತ್ರ ಖುರ್‌ಆನ್ ಅನ್ನು ದೀರ್ಘಕಾಲದವರೆಗೆ ಸಾವಿರಾರು ಸಹಚರರು ಮತ್ತು ಅನುಯಾಯಿಗಳ ಕಂಠಪಾಠ ಮಾಡಿದ್ದರು ಮತ್ತು ತಮ್ಮ ಎದೆಯಲ್ಲಿ ಸಂರಕ್ಷಿಸಲಾಗಿದೆ ಎಂದು ಆಕ್ಷೇಪಿಸುವವರು ನೆನಪಿನಲ್ಲಿಟ್ಟುಕೊಳ್ಳಬೇಕು.

**(ಆಕ್ಷೇಪಣೆ ಸಂಖ್ಯೆ 3)**

ಪವಿತ್ರ ಖುರ್‌ಆನ್ ರೂಪದಲ್ಲಿ ಅನೇಕ ಪುಸ್ತಕಗಳನ್ನು ಬರೆಯಲಾಗಿತ್ತು ಅದನ್ನು ಹಝ್ರತ್ ಉಸ್ಮಾನ್(ರ)ರವರು ಆ ಎಲ್ಲಾ ಪ್ರತಿಗಳನ್ನು ಸುಡಲು ಆದೇಶಿಸಿದರು ಮತ್ತು ಅವರ ಖುರ್‌ಆನ್ ಅನ್ನು ಜಾರಿಗೊಳಿಸಿದರು ಅದನ್ನು ಇಂದಿಗೂ ಓದಲಾಗುತ್ತದೆ ಎಂದು ಆಕ್ಷೇಪಿಸುವವರು ಬರೆಯುತ್ತಾರೆ.

ಉತ್ತರ: ಹಝ್ರತ್ ಉಸ್ಮಾನ್(ರ) ತನ್ನ ಖುರ್‌ಆನ್ ಅನ್ನು ಹೊರಡಿಸಿದ ಈ ಆಕ್ಷೇಪಣೆ ತಪ್ಪು ಮತ್ತು ಆಧಾರರಹಿತವಾಗಿದೆ. ಇದರ ಹೆಚ್ಚಿನ ವಿವರಗಳು ಹೀಗಿವೆ: ಹಝ್ರತ್ ಅಬೂಬಕ್ಕರ್(ರ)ರವರ ಖಿಲಾಫತ್ ಕಾಲಾವಧಿ 13 ಹಿಜರಿ ಯಿಂದ 24 ಹಿಜರಿವರೆಗೆ (ಕ್ರಿ.ಶ. 634 ರಿಂದ 645 ವರೆಗೆ) (2) ಹಝ್ರತ್ ಉಮರ್(ರ) ಅವರ ಖಲೀಫತ್ ಅವಧಿಯು 13 ಹಿಜರಿಯಿಂದ 24 ಹಿಜರಿಯವರೆಗೆ (ಕ್ರಿ.ಶ. 634ಯಿಂದ 645) ವರೆಗೆ, (3) ಹಝ್ರತ್ ಉಸ್ಮಾನ್(ರ)ರವರ ಖಿಲಾಫತ್ ಅವಧಿಯು 24 ಹಿಜರಿ ಯಿಂದ 35 ಹಿಜರಿಯವರೆಗೆ (ಕ್ರಿ.ಆ. 645ಯಿಂದ 656 ವರೆಗೆ) ಸುಮಾರು ಹನ್ನೊಂದು ವರ್ಷ ಆಗಿತ್ತು (4) ಹಝ್ರತ್ ಅಲಿ(ರ)ರವರ ಖಿಲಾಫತ್ ಅವಧಿ 35 ಹಿಜರಿಯಿಂದ 40 ಹಿಜರಿಯವರೆಗೆ (ಕ್ರಿ.ಶ.656 ದಿಂದ 660 ವರೆಗೆ) ನಾಲ್ಕು ಅಥವಾ ಐದು ವರ್ಷಗಳ ಕಾಲ ನಡೆಯಿತು.

ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ರವರ ಖಲೀಫತ್ ಸುಮಾರು 13 ವರ್ಷಗಳ ಕಾಲ ನಡೆಯಿತು. ಈ 13 ವರ್ಷ ಕಾಲಾವಧಿಯಲ್ಲಿ ಸಾವಿರಾರು ಹುಫ್ಫಾಝುರು ಹಾಗೂ ಲಕ್ಷಾಂತರ ಮುಸ್ಲಿಮರ ಹೃದಯಗಳಲ್ಲಿ ಪವಿತ್ರ ಖುರ್‌ಆನ್ ಸಂರಕ್ಷಿಸಲಾಗಿತ್ತು. ಇದು ಪ್ರವಾದಿ ಮುಹಮ್ಮದ್(ಸ)ರವರ ಮೇಲೆ ಅವತರಿಸಿದ ಪವಿತ್ರ ಖುರ್‌ಆನ್ ಆಗಿತ್ತು. ಮತ್ತು ಇವರಲ್ಲಿ ಹೆಚ್ಚಿನವರು ಪ್ರವಾದಿ(ಸ) ರವರ ಮೂಲಕವೇ ಕಂಠಪಾಠ ಮಾಡಿದ್ದರು.

ಮತ್ತು ಈ ಕಂಠಪಾಠಿಗಳು ಇಸ್ಲಾಮಿಕ್ ಮತ್ತು ಇಸ್ಲಾಮಿಕ್ ಅಲ್ಲದ ಸಾಮ್ರಾಜ್ಯಗಳಾದ್ಯಂತ ಹರಡಿದ್ದರು. ಈಗ ಪ್ರಶ್ನೆ ಉದ್ಭವವಾಗುವುದೇನೆಂದರೆ ಹಝ್ರತ್ ಉಸ್ಮಾನ್(ರ) ಅವರನ್ನು ಈ ಕಂಠಪಾಠಿಗಳ ಹೃದಯಗಳಲ್ಲಿದ್ದ ಪವಿತ್ರ ಖುರ್‌ಆನ್ ಅನ್ನು ಅಳುಸಿ ತಾವು ಜಾರಿಗೊಳಿಸಿದ ಖುರ್‌ಆನ್ ಅನ್ನು ಹಾಕಲು ಸಾಧ್ಯವೇ??

ಹದಿನಾಲ್ಕು ಶತಮಾನಗಳ ನಂತರವೂ ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಜಿಬ್ರೀಲ್(ಅ) ಅವರ ಮೂಲಕ ಪ್ರವಾದಿ ಮುಹಮ್ಮದ್(ಸ)ರವರ ಮೇಳೆ ಅವತರಿಸಿದ ಅದೇ ಖುರ್‌ಆನ್ ಮುಸ್ಲಿಮರಲ್ಲಿ ಇಂದಿಗೂ ಪ್ರಚಲಿತದಲ್ಲಿದೆ, ಅದರ ಗೊಂದಲಗಳನ್ನು ಸೃಷ್ಟಿಸಲು ಅನೇಕ ಪ್ರಯತ್ನಗಳು ನಡೆದವು ಆದರೆ ಅವೆಲ್ಲವನ್ನು ಅಲ್ಲಾಹನು ವ್ಯರ್ಥಗೊಳಿಸಿದನು. ಆದ್ದರಿಂದ ಆಕ್ಷೇಪಿಸುವವರು ಹದಿನಾಲ್ಕು ಶತಮಾನಗಳ ಇತಿಹಾಸವನ್ನು ಪರಿಗಣಿಸಬೇಕು.

ಹೀಗಾಗಿ ಆಕ್ಷೇಪಿಸುವವರು ಉಲ್ಲೇಖಿಸಿದ ಬುಖಾರಿಯ ಹದೀಸ್ ಹೀಗಿದೆ ಅದರಲ್ಲಿ ಹಝ್ರತ್ ಹಫ್ಸಾ(ರ)ರವರು ಮೂಲ ಪ್ರತಿಗಳೂ ಹಿಂತಿರುಗಿಸಿದ್ದಾರೆ ಎಂದು ಉಲ್ಲೇಖಿಸಲಾಗಿದೆ.

ಅನುವಾದ: ಮೂಲ ಹಸ್ತಪ್ರತಿಯನ್ನು ಹಝ್ರತ್ ಹಫ್ಸಾ ಅವರಿಗೆ ಹಿಂತಿರುಗಿಸಲಾಯಿತು, ನಂತರ ನಕಲು ಮಾಡಿದ ಹಸ್ತಪ್ರತಿಗಳಿಂದ ಒಂದೊಂದು ಪ್ರತಿಯನ್ನು ಪ್ರತಿ ಪ್ರದೇಶಕ್ಕೆ ಕಳುಹಿಸಲಾಯಿತು ಮತ್ತು ಖುರಾನ್ ಹೆಸರಿನಲ್ಲಿ ಬರೆಯಲಾದ ಮೂಲ ಹಸ್ತಪ್ರತಿಯನ್ನು ಹೊರತುಪಡಿಸಿ ಬೇರೆಯವರ ಬಳಿ ಇರುವುದನ್ನು ಸುಡಬೇಖು ಎಂದು ಆದೇಶಿಸಲಾಯಿತು. (ಸಹೀಹ್ ಬುಖಾರಿ, ಕಿತಾಬುತ್ತಫ್ಸೀರ್, ಬಾಬ್ ಜಮ ಅಲ್ ಖುರ್‌ಆನ್)

**(ಶೇಷ)**

**ಝಕಾತ್ ಒಂದು ಕಡ್ಡಾಯ ಪ್ರಮುಖ ಕರ್ಮವಾಗಿದೆ.**
**ಅದರ ಪಾಲನೆಯ ಕಡೆ ವಿಶೇಷ ಗಮನವಹಿಸಬೇಕು!**

ಜಮಾಅತ್ ಬಂಧುಗಳು ತಿಳಿದವರೇ ಆಗಿದ್ದಾರೆ. ಪವಿತ್ರ ಖುರ್‌ಆನ್‌ನಲ್ಲಿ ನಮಾಝ್ ನಿರ್ವಹಣೆ ಜೊತೆ ಜೊತೆಯಲ್ಲಿ ಝಕಾತಿನ ನಿರ್ದೇಶನವಿದೆ. ಆದುದರಿಂದ ಎಲ್ಲಾ ಅರ್ಹ ಬಂಧು ಭಗಿನಿಯರಲ್ಲಿ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಈ ಪ್ರಮುಖ ಕಡ್ಡಾಯ ನಿರ್ವಹಣೆಯತ್ತ ಗಮನ ಹರಿಸಬೇಕಾಗಿದೆ.

ಝಕಾತ್ ಇಸ್ಲಾಮಿನ ಮೂಲಭೂತ ಸಿದ್ಧಾಂತವಾಗಿದೆ. ಅದು ಎಲ್ಲಾ ನಿಗದಿತ ಅರ್ಹ ಜನರಿಗೆ ಕಡ್ಡಾಯವಾಗಿದೆ. ಆ ಪೈಕಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಓ ಎಲ್ಲಾ ನನ್ನ ಜಮಾಅತಿಗೆ ಸೇರಿದವರೆಂದು ಹೇಳುವ ಜನರೇ! ನೀವು ಆಕಾಶದಲ್ಲಿ ನಿಜವಾಗಿಯೂ ಭಯಭಕ್ತಿಯ ಮಾರ್ಗಗಳಲ್ಲಿ ನಡೆದವರಾದಾಗ ಮಾತ್ರ ನನ್ನ ಜಮಾಅತಿಗೆ ಸೇರಿದವರಾಗುವಿರಿ. ಆದುದರಿಂದ ತನ್ನ ಐದು ಹೊತ್ತಿನ ನಮಾಝುಗಳನ್ನು ಎಂಥ ಭಯ ಮತ್ತು ಆತ್ಮೀಯವಾಗಿ ನಿರ್ವಹಿಸಬೇಕೆಂದರೆ, ಅಲ್ಲಾಹನು ನಿಮ್ಮನ್ನು ನೋಡುತ್ತಿದ್ದಾನೆ ಎಂದಾಗಿರಬೇಕು. ಅಂತೆಯೇ ತನ್ನ ಉಪವಾಸಗಳನ್ನು ಅಲ್ಲಾಹನಿಗೋಸ್ಕರ ಪೂರ್ಣ ಶ್ರದ್ಧೆಯಿಂದ ಪಾಲಿಸುವವರಾಗಿರಿ. ಝಕಾತ್‌ಗೆ ಅರ್ಹರಾದ ಪ್ರತಿಯೊಬ್ಬರು ಝಕಾತ್ ನೀಡಬೇಕು. **(ಕಿಶ್ತಿ ನೂಹ್, ರೂಹಾನಿ ಖಝಾಇನ್, ಸಂಪುಟ-19,**

**ಪುಟ–15)**

ಆಭರಣಗಳ ಝುಕಾತ್ ನೀಡುವಿಕೆ ಕುರಿತು ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನೀವು ಉಪಯೋಗಿಸುವ ಆಭರಣಗಳು ಮತ್ತು ಒಮ್ಮೊಮ್ಮೆ ಬಡ ಸ್ತ್ರೀಯರಿಗೆ ಉಪಯೋಗಿಸಲು ನೀಡುವ ಆಭರಣಗಳು ಕುರಿತು ಕೆಲವರು ಭಾವಿಸುವುದೇನಂದರೆ ಅದರ ಮೇಲೆ ಝುಕಾತ್ ಕಡ್ಡಾಯವಲ್ಲ ಎಂದು. ಮತ್ತು ಯಾವ ಆಭರಣಗಳು ಉಪಯೋಗಿಸಲಾಗುತ್ತದೆಯೋ ಮತ್ತು ಇತರರಿಗೆ ಬಳಸಲು ಕೊಡುವುದಿಲ್ಲವೋ ಆ ಆಭರಣಗಳ ಮೇಲೆ ಝುಕಾತ್ ಕೊಡಬೇಕಾಗಿದೆ ಎಂದು. ಏಕೆಂದರೆ ಅದು ತನ್ನ ಸ್ವಂತಕ್ಕಾಗಿ ಬಳಸಲ್ಪಡುತ್ತದೆ. ನಮ್ಮ ಮನೆಗಳಲ್ಲಿ ಅದೇ ತರಹ ಕ್ರಮಬದ್ಧರಾಗಿರುತ್ತಾರೆ. ಮತ್ತು ಪ್ರತಿ ವರ್ಷ ತನ್ನ ಆಭರಣಗಳ ಝುಕಾತನ್ನು ನೀಡುತ್ತಾರೆ. ಮತ್ತು ಯಾವ ಆಭರಣಗಳು ರೂಪಾಯಿಗಳಂತೆ ಜಮಾ ಮಾಡಿ ಇಡುತ್ತಾರೋ. ಅದರ ಝುಕಾತ್ ಕೊಡುವುದರಲ್ಲಿ ಯಾರಿಗೂ ತಕರಾರು ಇಲ್ಲ.**(ಅಲ್–ಹಕಮ್ 17 ನವೆಂಬರ್ 1905, ಪುಟ 11)**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ನೆನಪಿಡಬೇಕಾದ ವಿಷಯವೇನೆಂದರೆ ಈ ತೆರಿಗೆಯನ್ನು ನಾವು 'ಝುಕಾತ್' ಎನ್ನುತ್ತೇವೆ. ಇದು ಆದಾಯದ ಮೇಲೆ ನಿರ್ಧಾರವಲ್ಲ. ಬದಲು ಬಂಡವಾಳ ಹಾಗೂ ಲಾಭ ಎಲ್ಲವೂ ಸೇರಿಸಿ ನೀಡಲಾಗುತ್ತದೆ. ಅದೇ ರೀತಿ 2.50% ವಾಸ್ತವದಲ್ಲಿ ಕೆಲ ಸಂಧರ್ಭಗಳಲ್ಲಿ ಲಾಭದ 50% ದಷ್ಟಾಗುತ್ತದೆ"
**(ಅಹ್ಮದಿಅತ್ ಯಾನಿ ಹಖೀಖಿ ಇಸ್ಲಾಮ್, ಅನ್ವಾರುಲ್ ಉಲೂಮ್, ಸಂಪುಟ–8, ಪುಟ–306)**

ಆಭರಣಗಳು ಮತ್ತು ನಗದು ರೂಪಾಯಿಯ ಝುಕಾತಿಗೆ ನಿರ್ಧರಿತ ಕ್ರಮದ ಕುರಿತು ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಅಲ್–ಖಾಮಿಸ್(ಅಬಿಅ) ಹೇಳುತ್ತಾರೆ. ಬೆಳ್ಳಿಗ್ಗೆ ಬೆಳ್ಳಿ ಮತ್ತು ಚಿನ್ನಕ್ಕೆ ಚಿನ್ನವೇ ನಿರ್ಧರಿತ ಕ್ರಮವಾಗಿರುವುದು. ಅದು ರಸೂಲುಲ್ಲಾಹ್(ಸ) ರವರ ಪರಿಶುದ್ಧ ಕಾಲದಲ್ಲಿ ರಸೂಲುಲ್ಲಾಹ್(ಸ) ಸ್ವಯಂ ಜಾರಿಗೆ ತಂದಿದ್ದರು. ಎಲ್ಲಿಯವರೆಗೆ ನಗದು ರೂಪಾಯಿಗಳ ನಿರ್ಧರಿತ ಕ್ರಮದ ಪ್ರಶ್ನೆ ಇದೆಯೋ ಅದನ್ನು ಪ್ರಸಕ್ತ ಸಮಯ ಲೋಕವು ಚಿನ್ನವನ್ನೇ ಬಂಡವಾಳ ಎಂದು ಒಪ್ಪಿಕೊಂಡಿದೆ. ಆದುದರಿಂದ ನಗದು ರೂಪಾಯಿಗಳ ಝುಕಾತ್ ಕೂಡ ಚಿನ್ನದ ಮಾನದಂಡದಂತೆಯೇ ಕೊಡಲಾಗುತ್ತದೆ. (ಮಕ್ತೂಬ್ ಹುಝೂರ್(ಅತಬಿಅ) ಬನಾಮ್ ಸದರ್ ಸಾಹಿಬ್ ಮಜ್ಲಿಸ್ ಇಫ್ತಾಹ್)

ರಸೂಲುಲ್ಲಾಹ್(ಸ) ಬೆಳ್ಳಿಗೋಸ್ಕರ 52 ವರೆ ತೊಲ (52.5) ಚಿನ್ನಕ್ಕೊಸ್ಕರ ಏಳುವರೆ ತೊಲ (7.5) ನಿಗದಿಪಡಿಸಲಾಗಿದೆ.

* ಯಾರ ಬಳಿ ಐವತ್ತೆರಡುವರೆ (52.5) ತೊಲ 612 ಗ್ರಾಂ ಬೆಳ್ಳಿ ಇದೆಯೋ ಮತ್ತು ಅದು ಅವರ ಬಳಿ ಒಂದು ವರ್ಷ ಆದರೆ. ಆಗ ಅದರ 1/40 ಭಾಗ ಅಂದರೆ ಎರಡುವರೆ ಪ್ರತಿಶತ ಝುಕಾತ್ ನೀಡುವುದು ಕಡ್ಡಾಯವಾಗಿರುತ್ತದೆ.

ಅದೇ ರೀತಿ ಯಾರ ಬಳಿ ಎಳುವರೆ (7.5) ತೊಲ 87 ಗ್ರಾಂ ಚಿನ್ನವಿರುತ್ತದೆ. ಅಥವಾ ಅದಕ್ಕೆ ಸಮನಾದ ನಗದು ಹಣದ ರಾಶಿಯಿರುತ್ತದೆ. ಅದರ ಮೇಲೆ ಒಂದು ವರ್ಷ ಅವಧಿ ಕಳೆದರೆ ಆಗ ಅದರ ಮೇಲೆಯೂ 1/40 ಭಾಗ ಅಂದರೆ ಎರಡುವರೆ ಪ್ರತಿಶತ ಝುಕಾತ್ ನೀಡುವುದು ಫರ್ಝ್ (ಕಡ್ಡಾಯ) ಆಗಿರುತ್ತದೆ.

* ಝುಕಾತ್ ರೂಪದಲ್ಲಿ ಪಡೆದ ಒಟ್ಟು ಮೊತ್ತ ಕೇಂದ್ರಕ್ಕೆ ರವಾನಿಸುವುದು ಅವಶ್ಯಕವಾಗಿದೆ.

ಅಲ್ಲಾಹನು ನಮಗೆಲ್ಲರಿಗೂ ಈ ಪ್ರಮುಖ ಕರ್ತವ್ಯವನ್ನು ಪಾಲಿಸಲು ಭಾಗ್ಯ ದಯಪಾಲಿಸಲಿ ಮತ್ತು ಜಮಾಅತಿನ ಎಲ್ಲಾ ಬಂಧುಗಳ ಸಂಪತ್ತು ಹಾಗೂ ಆತ್ಮಗಳಲ್ಲಿ ತನ್ನ ಅನುಗ್ರಹ ದಯಪಾಲಿಸಲಿ. **ಆಮೀನ್**

**(ಪತ್ರಿಕಾಂಗ)**

## ಅಂತಿಮ ವಿಜಯ

ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು. **(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖಝಾಇನ್ ಸಂಪುಟ 21, ಪುಟ 427)**

## ಅಹ್ಮದಿ ವಿದ್ಯಾರ್ಥಿಗಳು ಗಮನಹರಿಸಬೇಕು (ಜಾಮಿಯ ಅಹ್ಮದಿಯಾ ಖಾದಿಯಾನ್‌ನಲ್ಲಿ ಪ್ರವೇಶ)

ಜಾಮಿಯಾ ಅಹ್ಮದಿಯಾ ಖಾದಿಯಾನ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಸ್ಥಾಪಿಸಿರುವ ಪವಿತ್ರ ಸಂಸ್ಥೆಯಾಗಿದ್ದು, ಅಲ್ಲಿ ನೂರಾರು ವಿದ್ವಾಂಸರು ಮತ್ತು ಮುಬಲ್ಲಿಗೀನರು (ಬೋಧಕರು) ಪದವಿ ಪಡೆದಿದ್ದಾರೆ ಮತ್ತು ಇಸ್ಲಾಂ ಧರ್ಮದ ನಿಜವಾದ ಬೋಧನೆಗಳನ್ನು ಪ್ರಪಂಚದ ಮೂಲೆಗಳಿಗೆ ಹರಡುವ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಸಯ್ಯುದುನಾ ಹುಝೂರ್ ಅನ್ವರ್(ಅತಬಿಅ) ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಸ್ಥಾಪಿಸಿದ ಈ ಪವಿತ್ರ ಧಾರ್ಮಿಕ ಸಂಸ್ಥೆಯಿಂದ ಶಿಕ್ಷಣವನ್ನು ಪಡೆಯುವ ಮೂಲಕ ಸರಣಿಯ ಸೇವೆಯತ್ತ ಅಹ್ಮದಿ ವಿದ್ಯಾರ್ಥಿಗಳ ಗಮನವನ್ನು ಹಲವಾರು ಸಂದರ್ಭಗಳಲ್ಲಿ ಸೆಳೆದಿದ್ದಾರೆ. ಆದ್ದರಿಂದ, ಹುಝೂರ್ ಅನ್ವರ್(ಅತಬಿಅ) ಅವರ ಸೂಚನೆಗಳ ಬೆಳಕಿನಲ್ಲಿ, ಹೆಚ್ಚು ಹೆಚ್ಚು ವಾಖಿಫೀನೆ ನೌ ಹಾಗೂ ವಾಖಿಫೀನ್ ಅಲ್ಲದ ಹೊಸ ವಿದ್ಯಾರ್ಥಿಗಳನ್ನು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶವನ್ನು ಪಡೆದು ಧಾರ್ಮಿಕ ಶಿಕ್ಷಣವನ್ನು ಪಡೆದುಕೊಂಡು ಸರಣಿಯ (ಜಮಾಅತ್ತಿನ) ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಳ್ಳಬೇಕು.

ಜಾಮಿಯಾ ಅಹ್ಮದಿಯಾದಲ್ಲಿ 2022–2023ರ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪ್ರಕ್ರಿಯೆಯು ಏಪ್ರಿಲ್ 2022 ರಿಂದ ಪ್ರಾರಂಭವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಜಾಮಿಯಾ ಅಹ್ಮದೀಯಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಯನ್ನು ಆನ್‌ಲೈನ್ ಮುಖಾಂತರ ನಡೆಸಲಾಗುತ್ತಿದೆ. ಆದ್ದರಿಂದ, ಜಾಮಿಯಾ ಅಹ್ಮದಿಯಕ್ಕೆ ಸೇರಲು ಬಯಸುವ ವಿದ್ಯಾರ್ಥಿಗಳು ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್) ಅನ್ನು ಸಂಪರ್ಕಿಸಿ ಹಾಗೂ ಸಾಧ್ಯವಾದಷ್ಟು ಬೇಗ ಜಾಮಿಯಾ ಅಹ್ಮದಿಯಾ ಪ್ರವೇಶ ಪತ್ರವನ್ನು ಭರ್ತಿ ಮಾಡಿ ಅದನ್ನು ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್)ನ ಕಚೇರಿಗೆ E-mail ಅಥವಾ ಪೋಷ್ಟ್ ಮೂಲಕ ಕಳುಹಿಸಬೇಕು. ಪ್ರವೇಶದ ಷರತ್ತುಗಳಿಗಾಗಿ ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್)ನ ಇಲಾಖೆಯನ್ನು ಸಂಪರ್ಕಿಸಬಹುದು.

**(ಸದರ್ ಕೆರಿಯರ್ ಪ್ಲಾನಿಂಗ್ ಕಮೀಟಿ ವಖ್ಫೆ ನೌ ಭಾರತ)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು

ಸಯ್ಯುದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

## ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ವಾರಪತ್ರಿಕೆ "ಬದರ್" ಇದೀಗ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದೆ.

ಈ ಪತ್ರಿಕೆಯ ಹೆಸರು **"ಬದರ್"** ಎಂದಾಗಿದೆ. ಪೂರ್ಣ ಚಂದ್ರ ಎಂದರ್ಥ. ಇದು ಜಮಾಅತೆ ಅಹ್ಮದಿಯದ ಒಂದು ಧಾರ್ಮಿಕ ಪತ್ರಿಕೆ ಆಗಿದೆ ಅದರ ಮೂಲ ಉದ್ದೇಶ ಜಮಾಅತ್ತಿನ ಸದಸ್ಯರ ತರಬೇತಿ, ಶಿಕ್ಷಣ, ಒಳ್ಳೆ ನೈತಿಕತೆ ಕಲಿಸುವುದಾಗಿದೆ.

ನಮ್ಮ ಎರಡು ಉದ್ದೇಶಗಳಿವೆ. ಒಂದು ಅಲ್ಲಾಹನ ಹಕ್ಕನ್ನು ನಿಭಾಯಿಸುವುದು ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ.

ಅಲ್ಲಾಹನ ಹಕ್ಕು ಏನಾಗಿದೆ ಎಂದರೆ ಅವನನ್ನು ಆರಾಧಿಸುವುದು ಅವನು ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾಗಿದ್ದಾನೆ ಮತ್ತು ಅವನ ಉಪಕಾರಗಳನ್ನು ನೆನಪಿಸಿಕೊಂಡು ಅವನಿಗೆ ವಿಧೇಯತೆ ತೋರಿಸುವುದಾಗಿದೆ.

ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ. ದಾಸರ ಹಕ್ಕುಗಳೇನಂದರೆ ಅಗತ್ಯವುಳ್ಳವರನ್ನು ಸಹಾಯ ಮಾಡುವುದು, ಯಾರನ್ನು ದುಃಖ, ತೊಂದರೆ ಅಥವಾ ಸಂಕಷ್ಟ ಕೊಡಬಾರದು, ರಾಷ್ಟ್ರದಲ್ಲಿ ಕಿಡಿಗೇಡಿತನ ಹುಟ್ಟಿಸಬಾರದು, ಸ್ವದೇಶ ಪ್ರೇಮ ಈಮಾನಿನ ಒಂದು ಭಾಗವಾಗಿದೆ ಹಾಗೂ ಸ್ವದೇಶದ ಅಭಿವೃದ್ಧಿಗಾಗಿ ಶ್ರಮವಹಿಸುವುದಾಗಿದೆ.

ಈ ಪತ್ರಿಕೆಯು 100 ವರ್ಷಕ್ಕಿಂತ ಹೆಚ್ಚು ಕಾಲಾವಧಿಯಿಂದ ಈ ಉದ್ದೇಶದ ಪ್ರಕಾರ ಜಮಾಅತ್ತಿನ ಸದಸ್ಯರ ಶೈಕ್ಷಣಿಕವಾಗಿ ತರಬೇತಿ ಮಾಡುತ್ತಾ ಬಂದಿದೆ. ಅದರ ಪ್ರತಿ ಫಲವಾಗಿ ನಮಗೆ ಅಲ್ಲಾಹನ ಅನುಗ್ರಹದಿಂದ ಶಾಂತಿಯುತ ಪಂಗಡ ಎಂದು ವಿಶ್ವದಾದ್ಯಂತ ಪರಿಗಣಿಸುತ್ತಾರೆ.

ಅಕ್ಟೋಬರ್ 1902ರಲ್ಲಿ ಜಾಗತಿಕ ಅಹ್ಮದಿಯ ಮಯಸ್ಲಿಮ್ ಜಮಾಅತ್ತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖದಿಯಾನಿ(ಅಲೈಹಿಸ್ಸಲಾಮ್) ಅವರು ಈ ಪತರಿಕೆಯನ್ನು ಉರ್ದು ಭಾಷೆಯಲ್ಲಿ ಉದ್ಘಾಟಿಸಿದರು. ಇಂದು ಈ ಪತ್ರಿಕೆಯು ಭಾರತದ ಏಳು ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿದೆ. ಉರ್ದುವನ್ನು ಬಿಟ್ಟು ಹಿಂದಿ, ತಮಿಳು, ತೆಲುಗು, ಬಾಂಗ್ಲ, ಒಡಿಯಾ, ಮಳಯಾಳಂ ಹಾಗೂ ಕನ್ನಡ. ಕಳೆದ 2.5 ವರ್ಷದಿಂದ ಕನ್ನಡದಲ್ಲಿಯು ಈ ಪತ್ರಿಕೆಯು ಪ್ರಕಟಗೊಳ್ಳುತ್ತಿರಿವುದು ಬಹಳ ಸಂತೋಷದ ವಿಷಯವಾಗಿದೆ. ಈ ಪತ್ರಿಕೆಯು ಧಾರ್ಮಿಕ ಪತ್ರಿಕೆ ಆದ್ದರಿಂದ ರಾಜಕೀಯ ನಿಟ್ಟಿನಲ್ಲಿ ಯಾವ ಸಂಬಂಧವೂ ಇಲ್ಲ.

ಈ ಪತ್ರಿಕೆಯಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರವರ ಶುಕ್ರವಾರದ ಪ್ರವಚನ (ಖುತ್‌ಬ ಜುಮುಅ) ವಿಶೇಶವಾಗಿರುತ್ತದೆ. ಆ ಖುತ್‌ಬದಲ್ಲಿ ಅವರು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳ ಶಿಕ್ಷಣಗಳ ಪ್ರಕಾರ ತಮ್ಮ ಜಮಾಅತ್ತಿನ ಸದಸ್ಯರನ್ನು ಸಂಬೋಧಿಸುತ್ತಾರೆ. ನಿಮ್ಮ ಈ ಪ್ರವಚನವೂ ಎಂ.ಟಿ.ಎ ಎಂಬ ಚ್ಯಾನಲ್‌ನಲ್ಲಿ ಪ್ರತಿ ಶುಕ್ರವಾರ ನೇರವಾಗಿ ಪ್ರಸಾರವಾಗುತ್ತದೆ. ಅದನ್ನು ಇಡೀ ವಿಶ್ವದಾದ್ಯಂತ ಕೇಳ ಹಾಗೂ ನೋಡಬಹುದು. ತದನಂತರ ಈ ಖುತ್‌ಬ ಪತ್ರಿಕೆಯಲ್ಲಿ ಪಕಟಗೊಳ್ಳುತ್ತದೆ. ಖಲೀಫರ ಖುತ್‌ಬ ಈ ಪತ್ರಿಕೆಯ ಪ್ರಾಣವಾಗಿದೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ವಾಗ್ದಾತ್ತ ಮಹೀಹರ 5ನೇ ಖಲೀಫರಾಗಿದ್ದಾರೆ ಅವರು ಲಂಡನ್‌ನಲ್ಲಿ ವಾಸವಾಗಿದ್ದಾರೆ. ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಇಮಾಮರಾಗಿದ್ದಾರೆ. ಅದಲ್ಲದೆ ಈ ಪತ್ರಿಕೆಯಲ್ಲಿ ಖಲೀಫರ ಪ್ರವಾಸಗಳ ವರದಿಗಳು ಪ್ರಕಟಗೊಳ್ಳುತ್ತದೆ ಅವೂ ಬಹಳ ಕುತೂಹಲಕಾರಿ ಆಗಿರುತ್ತದೆ. ಈ ವರದಿಗಳು ಜಮಾಅತ್ತಿನ ಸದಸ್ಯರ ಜ್ಞಾನ ಅಭಿವೃದ್ಧಿಯಲ್ಲಿ ವಿಶೇಷವಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಜಮಾಅತ್ತಿನ ಕಾರ್ಯಗಳ ವರದಿಗಳು ಮತ್ತು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಅಭಿಮೃದ್ಧಿಸುವಂತಹ ಜ್ಞಾನ ಭರಿತ ಲೇಖನಗಳು ಪ್ರಕಟಗೊಳ್ಳುತ್ತದೆ.

ಹೀಗಾಗಿ ಈ ಪತ್ರಿಕೆಯು ಮಹತ್ವಪೂರ್ಣವಾದ ಪತ್ರಿಕೆ ಆಗಿದೆ.

ಎಲ್ಲಾ ಓದುಗರಲ್ಲಿ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕಾಗಿ ವಿನಂತಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99153 79255, 9902678609, 9866358609 (ವ್ಯವಸ್ಥಾಪಕರು)

### ವಿಶೇಶ ಸೂಚನೆ

"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.

ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

## ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ಸಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:-**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರಿಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ-5, ಪುಟ-48-49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್-ವ-ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

## ಆಡಂಬರ ಮತ್ತು ತೋರ್ಪಡಿಕೆಗೋಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ-3, ಪುಟ-284)**

**(ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:

**NATIONAL TOLL FREE : 1800-103-2131**

ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ (ಶುಕ್ರವಾರ ರಜೆ)

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 19 May 2022, Issue No. 20

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 19ರ ಉಳಿದ ಭಾಗ)**

ಹುಝೂರ್ ಅನ್ವರ್ ಹೇಳಿದರು. ಇನ್ನೊಬ್ಬರು ಉಪ ಮೇಯರ್ ಇಲ್ಲಿ ಮಸೀದಿಯ ವಿಶೇಷತೆಗಳ ಬಗ್ಗೆ ವಿವರಿಸಿದರು. ಮತ್ತು ತಮ್ಮ ಭಾವನೆಗಳನ್ನು ಹಂಚಿಕೊಂಡರು. ಅವರಿಗೆ ಸಹ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಇಸ್ಲಾಮಿನ ಪ್ರತಿ ಯಾವ ಭರವಸೆಗಳನ್ನು ಅವರು ವ್ಯಕ್ತಪಡಿಸಿದ್ದಾರೆ ಅಥವಾ ಅವರ ಕಲ್ಪನೆಯಾಗಿತ್ತು. ಅದು ಇಸ್ಲಾಮಿನ ಯಥಾರ್ಥ ಆತ್ಮವಾಗಿದೆ. ಇನ್‌ಶಾಅಲ್ಲಾಹ್ ಈ ಮಸೀದಿ ನಿರ್ಮಾಣವಾದ ನಂತರ ಅದಕ್ಕಿಂತ ಮಿಗಿಲಾಗಿ ಅಹ್ಮದಿ ಮುಸ್ಲಿಮರ ವರ್ತನೆಗಳಲ್ಲಿ ಮತ್ತು ಅವರ ನಡತೆಗಳಲ್ಲಿ ಸುಧಾರಣೆ ಕಾಣುವಿರಿ.

ಹುಝೂರ ಅನ್ವರ್ ಹೇಳಿದರು. ಐಕ್ಯತೆಯ ಮಾತು ಆಗುತ್ತಿದೆ. ನನ್ನ ದೃಷ್ಟಿಯಲ್ಲಿ ಐಕ್ಯತೆ ಎಂದರೆ ಕೇವಲ ಬಾಹ್ಯ ಬೇಟೆಗಳಲ್ಲ, ಬದಲು ಯಥಾರ್ಥ ಐಕ್ಯತೆ, ಇಲ್ಲಿಯ ನಿವಾಸಿಗಳಾಗುತ್ತಿರುವ ಅಹ್ಮದಿಯರು ಬೇರೆ ದೇಶಗಳಿಂದ ಇಲ್ಲಿ ಬಂದಿರುತ್ತಾರೆ. ಇಲ್ಲಿ ಅವರಿಗೆ ಜರ್ಮನಿಯ ನಾಗರಿಕತೆ ದೊರೆತಿರುತ್ತದೆ. ಇಲ್ಲಿ ಬಂದ ನಂತರ ಅವರಿಗೆ ಜರ್ಮನ್ ನಾಗರಿಕೆರಿಗೆ ದೊರೆಯುವಂತಹ ಉಪಯೋಗಗಳು ಪಡೆದಿರುತ್ತಾರೆ. ಅವರ ಮಕ್ಕಳು ಉನ್ನತ ಶಿಕ್ಷಣ ಪಡೆಯುತ್ತಾರೆ. ಆದರೆ ಯಥಾರ್ಥ ಐಕ್ಯತೆ ಎಂದರೆ ಈಗ ಈ ದೇಶದೊಡನೆ ಪರಿಪೂರ್ಣ ನಿಷ್ಠೆ ತೋರಿಸಬೇಕು. ಅದು ವಿಶ್ವಾಸದ ಒಂದು ಅಂಗವಾಗಿದೆ. ಪರಿಪೂರ್ಣ ವಿಶ್ವಾಸ ತೋರಿಸದಿದ್ದರೆ, ದೇಶದ ಪ್ರಗತಿಯಲ್ಲಿ ಭಾಗವಹಿಸಲಿಲ್ಲ ಎಂದರೆ, ಇಲ್ಲಿಯ ಸಮಾಜದ ಒಳಿತಿಗಾಗಿ ತಮ್ಮ ಯೋಚನೆಗಳನ್ನು, ತಮ್ಮ ಬುದ್ಧಿವಂತಿಕೆಯನ್ನು ಮತ್ತು ತಮ್ಮ ಎಲ್ಲಾ ಸಾಮರ್ಥ್ಯಗಳನ್ನು ಬಳಸದಿದ್ದರೆ ಅದರ ತಾತ್ಪರ್ಯ ಅದು ನಿಜವಾದ ಐಕ್ಯತೆ ಅಲ್ಲ ತಮ್ಮ ವಿಶ್ವಾಸದ ಹಕ್ಕು ಸಹ ಪಾಲಿಸುತ್ತಿಲ್ಲ. ಏಕೆಂದರೆ ನಮಗೆ ನಮ್ಮ ನಬಿ(ಸ) ರವರು ಹೀಗೆ ನುಡಿದಿರುವರು. ನಿಮ್ಮ ದೇಶದ ಪ್ರತಿಯಿರುವ ನಿಷ್ಠೆಯು ನಿಮ್ಮ ವಿಶ್ವಾಸದ ಒಂದು ಅಂಗವಾಗಿದೆ. ಹಾಗೆ ನಾನು ಭಾವಿಸುತ್ತೇನೆ ಅಹ್ಮದಿಯರ ನಡವಳಿಕೆಯಿಂದ ನೀವು ಅದನ್ನು ಕಂಡಿರಬೇಕು. ಇನ್‌ಶಾಅಲ್ಲಾಹ್ ಮುಂದೆ ಅದಕ್ಕಿಂತ ಮಿಗಿಲಾಗಿ ಕಾಣುವಿರಿ.

ಹುಝೂರ್ ಅನ್ವರ್ ನುಡಿದರು. ಅವರ ಒಂದು ಮಾತು ನನಗೆ ತುಂಬ ಮೆಚ್ಚುಗೆಯಾಯಿತು. ನಮಗೆ ಮತ್ತೊಬ್ಬರ ಭಾವನೆಗಳನ್ನು ಅರಿಯುವ ಗುಣವಿರಬೇಕಾಗಿದೆ. ಅದೇ ಮಾತು ರಸ್ತೆಯಲ್ಲಿ ಮಸೀದಿಗೆ ಅಡಿಗಲ್ಲು ಇಟ್ಟ ಸಂದರ್ಭದಲ್ಲಿ ಹೇಳಿದ್ದೆ. ನಾವು ಇಬ್ಬರು ಮತ್ತೊಬ್ಬರ ಭಾವನೆಗಳನ್ನು ಅರಿತುಕೊಳ್ಳುವವನಾದರೆ ಅವರ ಬಗ್ಗೆ ಯೋಚಿಸುವವರಾದರೆ, ಆಗ ಮಾತ್ರ ನಾವು ಪರಸ್ಪರ ಪ್ರೀತಿ ಸ್ನೇಹದಿಂದ ಇರಬಲ್ಲೆವು. ಆಗ ಮಾತ್ರ ಒಂದು ಸುಂದರ ಸಮಾಜ ಕೊಡಬಹುದಾಗಿದೆ. ಧರ್ಮದ ಉದ್ದೇಶವೇ ಅದಾಗಿರುತ್ತದೆ. ಪರಸ್ಪರರಲ್ಲಿ ಪ್ರೀತಿಯನ್ನು ಬೆಳೆಸಿರಿ. ಪವಿತ್ರ ಖುರ್‌ಆನ್ ಹೇಳುತ್ತದೆ. ಧರ್ಮದ ಸಂಬಂಧ ನಿಮ್ಮ ಹೃದಯಕ್ಕೆ ಸಂಬಂಧಿಸಿದ್ದಾಗಿದೆ. ಯಾರಿಗೆ ಯಾವ ಧರ್ಮ ಹಿತವೆನಿಸುತ್ತದೆಯೋ ಆ ಧರ್ಮ ಸ್ವೀಕರಿಸಬಹುದಾಗಿದೆ. ಆದರೆ ಮಾನವೀಯ ಮೌಲ್ಯಗಳನ್ನು ಸದಾ ನಿಮ್ಮ ಮುಂದಿರಲಿ. ಒಬ್ಬರು ಮತ್ತೊಬ್ಬರ ಭಾವನೆಗಳನ್ನು ಆದರಿಸಬೇಕು. ಹಾಗೆ ಮಾಡುತ್ತಿಲ್ಲ ಎಂದಾದರೆ ನೀವು ಒಳ್ಳೆಯ ಮನುಷ್ಯರಲ್ಲ, ಒಳ್ಳೆಯ ಮನುಷ್ಯರಲ್ಲ ಎಂದರೆ ನಿಮ್ಮಿಂದ ಅಲ್ಲಾಹನ ಹಕ್ಕುಗಳನ್ನು ಸಹ ಪಾಲಿಸಲು ಸಾಧ್ಯವಿಲ್ಲ. ಅದೇ ರೀತಿ ಅವರು ನನಗೆ ನೀಡಿದ ಪಾರಿತೋಷಕದ ಬಗ್ಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಹುಝೂರ್ ಅನ್ವರ್ ಹೇಳಿದರು. ಎಂಪಿ ಸಾಹೇಬರು ಸಹ ಕೆಲ ಮಾತುಗಳನ್ನು ಹೇಳಿದ್ದಾರೆ. ಒಂದು ಮಾತು ಅವರು ಭಿನ್ನಾಭಿಪ್ರಾಯಗಳ ಬಗ್ಗೆ ಹೇಳಿದ್ದಾರೆ. ಭಿನ್ನಾಭಿಪ್ರಾಯಗಳ ಒಂದು ಇತಿಹಾಸವೇ ಅವರು ತೋರಿಸಿದ್ದರೆ. ಮತ್ತು ಇದು ಸಹ ಹೇಳಿದ್ದಾರೆ. ಎರಡು ವಿಭಿನ್ನ ಪಂಥದವರು ಒಂದೇ ಚರ್ಚಿನಲ್ಲಿ ಒಟ್ಟಿಗೆ ಆರಾಧನೆ ಮಾಡುತ್ತಾರೆ. ಇದೊಂದು ಬಹುಮುಖ್ಯ ಗುಣವಾಗಿದೆ. ಮತ್ತು ಅದೇ ನಿಜವಾದುದು. ಆ ಕುರಿತು ಈ ಮೊದಲು ಸಹ ವಿವರಿಸುತ್ತೇನೆ. ಒಬ್ಬರು ಮೊತ್ತೊಬ್ಬರ ಭಾವನೆಗಳನ್ನು ಅರಿತುಕೊಂಡರೆ, ಏಕಜೀವನ ಆರಾಧನೆಗೋಸ್ಕರ, ಅದು ನಮ್ಮ ಸೃಷ್ಟಿಕರ್ತರನ್ನು ಆರಾಧಿಸುವ ಸಲುವಾಗಿ ನಿರ್ಮಿಸಿರುತ್ತೇನೆ. ಇತರರ ಉಪಯೋಗಕ್ಕಾಗಿ ಆರಾಧನೆಗೋಸ್ಕರ ಕೊಡಬಹುದಾಗಿದೆ. ಎಲ್ಲ ಧರ್ಮಗಳು ಶಾಂತಿ ಮತ್ತು ಪ್ರೀತಿಯ ಶಿಕ್ಷಣವೇ ಹೊಂದಿರುತ್ತವೆ. ಆದರೆ ಆ ಧರ್ಮಗಳನ್ನು ಕೆಡಿಸಿದ್ದಾರೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ಅದೇ ಮಾತನ್ನು ನಮ್ಮ ಅರಿವಿಗೆ ತಂದಿದ್ದಾರೆ. ಧರ್ಮಗಳನ್ನು ಕೆಡಿಸಲಾಗಿದೆ. ಈಗ ಅದನ್ನು ಪುನ: ಪ್ರೀತಿ ಹಾಗೂ ಸ್ನೇಹದ ಶಿಕ್ಷಣ ನೀಡಲು ನಾನು ಬಂದಿರುತ್ತೇನೆ. ಮತ್ತೆ ತಮ್ಮ ಅನುಯಾಯಿಗಳಿಗೆ ಹೇಳಿದರು. ನನಗೆ ನಂಬುವ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿದೆ. ಈ ಪ್ರೀತಿ ಮತ್ತು ಸ್ನೇಹದ ಶಿಕ್ಷಣವನ್ನು ಮತ್ತು ಮಾನವೀಯ ಮೌಲ್ಯಗಳನ್ನು ಸ್ಥಾಪಿಸಬೇಕು. ಆಗ ಮಾತ್ರ ನೀವು ಆರಾಧನೆಯ ಹಕ್ಕುಗಳನ್ನು ಪಾಲಿಸುವವರಾಗುವಿರಿ ಮತ್ತು ಮಸೀದಿಗಳ ಹಕ್ಕು ಸಹ ಪಾಲಿಸುವವರಾಗುವಿರಿ.

ಹುಝೂರ್ ಅನ್ವರ್ ನುಡಿದರು. ಇಂದು ಲೋಕಕ್ಕೆ ಶಾಂತಿಯ ಅಭಾವವಿದೆ. ಲೋಕದಲ್ಲಿ ಬಹಳಷ್ಟು ಗೊಂದಲ ನಿರ್ಮಾಣವಾಗಿದೆ. ಕೇವಲ Middle East (ಮಧ್ಯಪೂರ್ವ) ದಲ್ಲಿ ಗೊಂದಲವಿದೆ ಎಂದು ಹೇಳಲಾಗದು. ಅಥವಾ ಕೆಲ ಅರಬ್ ರಾಷ್ಟ್ರಗಳಲ್ಲಿ ಗೊಂದಲವಿದೆ ಎನ್ನಲಾಗದು ಅಥವಾ ಪೂರ್ವ ಯೋರೋಪಿನ ದೇಶಗಳಲ್ಲಿ ಗೊಂದಲವಿದೆ ಎಂದು ಹೇಳಲಾಗದು. ಈ ಗೊಂದಲಗಳು ಸಣ್ಣ ಸಣ್ಣ ಪ್ರಮಾಣದಲ್ಲಿರುತ್ತವೆ. ಅದು ಬೆಳೆಯುತ್ತ ಲೋಕವನ್ನು ಸೆಳೆದುಕೊಳ್ಳುತ್ತದೆ. ಅದೇ ದೃಶ್ಯಗಳು ನಮಗೆ ಹಳೆಯ ಯುದ್ಧ ಇತಿಹಾಸಗಳಲ್ಲಿ ಕಂಡು ಬರುತ್ತವೆ. ಆದುದರಿಂದ ಈ ಪೈಕಿ ನಮ್ಮಲ್ಲಿ ಪ್ರತಿಯೊಬ್ಬರಿಗೆ ಪ್ರಯತ್ನಿಸಬೇಕಾಗಿದೆ. ಲೋಕದಿಂದ ಈ ಹರಡಿದ ಗೊಂದಲಗಳು ದೂರವಾಗಲಿ ಮತ್ತು ಶಾಂತಿ ಪ್ರೀತಿ ಸ್ನೇಹ ಮತ್ತು ಸಹೋದರತೆಯಿಂದ ಇಂತಹ ಶಿಕ್ಷಣವನ್ನು ಹರಡಿಸಬೇಕು ಮತ್ತೆ ತಮ್ ನಡತೆಳ ಮೂಲಕ ಒಬ್ಬರು ಮತ್ತೊಬ್ಬರನ್ನು ಸಹಕರಿಸುತ್ತ ಪ್ರಯತ್ನ ಮಾಡಬೇಕು. ಅದರಿಂದ ಎಲ್ಲಿ ನಾವು ಒಬ್ಬರು ಮತ್ತೊಬ್ಬರನ್ನು ರಕ್ಷಿಸಲು ಸಾಧ್ಯವಾಗುವುದು. ಅಲ್ಲಿ ಬರುವ ಪೀಳಿಗೆ ಸಹ ರಕ್ಷಣೆ ಹೊಂದುವಂತಾಗುವುದು. ಬರುವ ಪೀಳಿಗೆಗಳು ನಮ್ಮ ಅಜಾಗರೂಕತೆಯಿಂದ ಯುದ್ಧಗಳಿಗೆ ಬಲಿಯಾದರೆ, ಅದರ ಭಯಂಕರವಾದ ಪರಿಣಾಮ ಪೀಳಿಗೆಯ ನಂತರ ಪೀಳಿಗೆಯನ್ನು ಅನುಭವಿಸಬೇಕಾದೀತು. ಆ ಪೀಳಿಗೆಗಳು ನಮಗೆ ದೂಷಿಸುವರು. ಆದುದರಿಂದ ಇಂದು ನಮಗೆ ಪ್ರೀತಿ ಸ್ನೇಹ ಬೆಳೆಸುವ ಅಗತ್ಯವಿದೆ. ಅದಕ್ಕಾಗಿ ನಮಗೆ ಮೊಲಗಿಂತ ಮಿಗಿಲಾದ ಪ್ರಯತ್ನಗಳು ಮಾಡಬೇಕಾಗಿದೆ. ನನ್ನ ಪ್ರಾರ್ಥನೆಯಿದೆ. ಆ ರೀತಿಯ ಪ್ರಯತ್ನಗಳ ಭಾಗ್ಯ ಅಲ್ಲಾಹನು ನಮಗೆ ದಯಪಾಲಿಸಲಿ.

ಹುಝೂರ್ ಅನ್ವರ್ ನುಡಿದರು. ಅಹ್ಮದಿಯರಿಗೆ ಆಗಾಗ ನಾನು ಗಮನ ಸೆಳೆಯುತ್ತಿರುತ್ತೇನೆ. ಮತ್ತೊಮ್ಮೆ ವಿಶೇಷವಾಗಿ ಅಹ್ಮದಿಯರಿಗೆ ಹೇಳುತ್ತೇನೆ. ಈ ಮಸೀದಿ ನಿರ್ಮಾಣವಾದ ನಂತರ ಮೊದಲಿಗಿಂತ ಹೆಚ್ಚು ಅವರ ಕಾಳಜಿ ನಿಮ್ಮ ಬಗ್ಗೆ ಇರುವುದು. ಆದುದರಿಂದ ಮೊದಲಿಗಿಂತ ಹೆಚ್ಚು ಪ್ರೀತಿ ಸ್ನೇಹ ಪರಸ್ಪರರಿಗಾಗಿ ಹೊಂದಬೇಕಾಗಿದೆ. ಅಲ್ಲಾಹನ ಆರಾಧನೆಯ ಹಕ್ಕು ಸಹ ಪಾಲಿಸಬೇಕು. ಮತ್ತು ಈ ಮಸೀದಿ ನಿರ್ಮಾಣವಾದ ನಂತರ ತಮ್ಮ ಪರಿಸರದ ಹಕ್ಕು ಸಹ ಪಾಲಿಸಬೇಕು. ಮಾನವರ ಸೇವೆ ಸಹ ಮಾಡಬೇಕು ಮತ್ತು ಮೊದಲಿಗಿಂತ ಹೆಚ್ಚು ಪ್ರೀತಿ ಸ್ನೇಹದ ಈ ಸಂದೇಶ ಈ ನಗರದಲ್ಲಿಯೂ ಮತ್ತು ತಮ್ಮ ನೆರೆಹೊರೆಯಲ್ಲೂ ತಲುಪಿಸಬೇಕು. ಅಲ್ಲಾಹನು ನಿಮಗೆ ಆ ಭಾಗ್ಯ ದಯಪಾಲಿಸಲಿ. ಆಮೀನ್.

ಹುಝೂರ್ ಅನ್ವರ್ ಅವರ ಈ ಭಾಷಣ 7 ಗಂಟೆ ಆಗಿ 35 ನಿಮಿಷಕ್ಕೆ ಅಂತ್ಯವಾಯಿತು. ಅಂತಿಮವಾಗಿ ಹುಝೂರ್ ಅನ್ವರ ದುಆ ಮಾಡಿಸಿದರು.

**NDR ರೇಡಿಯೋದಿಂದ ಹುಝೂರರ ಸಂದರ್ಶನ**

ಅನಂತರ ಕಾರ್ಯಕ್ರಮಗಳನ್ವಯ ಅತಿಥಿಗಳ ಸೇವೆಯಲ್ಲಿ ರಾತ್ರಿಯ ಭೋಜನ (ಡಿನ್ನರ್) ನೀಡಲಾಯಿತು. ಭೋಜನವಾದ ಕೂಡಲೇ NDR ರೇಡಿಯೋದ ಓರ್ವ ಪತ್ರಕರ್ತರ ಪ್ರತಿನಿಧಿ ಹುಝೂರರ ಸಂದರ್ಶನವನ್ನು ನಡೆಸಿದನು.

**(ಮುಂದುವರಿಯುವುದು)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.